ಪ್ರಮೇಯನವಮಾಲಿಕಾ

ತಾತ್ಪರ್ಯ : ವಿದ್ವಾನ್ ಬೆ. ನಾ. ವಿಜಯೀಂದ್ರಾಚಾರ್ಯ

ಶ್ರೀಶಪ್ರೀತ್ಯೈ ಪ್ರಜಾತಃ ಸುಮಹಿತಮಹಿಮಾ ಶ್ರೀಹನೂಮಾನ್ನಿದೇಶಾತ್
ರಾಮಸ್ಯೋಲ್ಲಂಘಿತಾಬ್ಧಿಃ ಸಹರಿರಥಗತಃ ಸೇತುನಾ ಪಿಷ್ಟದುಷ್ಟಃ ।
ಭೂಭೃನ್ನೀರಾವಣಾರಿಂ ಪುರಗಮುರುದಯಂ ಪೂಜಯಿತ್ವಾ ಸಸೀತಂ
ಪಶ್ಯನ್ ಕಿಂಪೂರುಷೇತಂ ಸತತಮಪಿ ಮಹಾಪ್ರಾಣಮುಖ್ಯೋಽವತಾನ್ಮಾಮ್ ॥೧॥

ಮೂಲರೂಪಿ ಮುಖ್ಯಪ್ರಾಣನು ಲಕ್ಷ್ಮೀನಾರಾಯಣರ ಪ್ರೀತಿಗಾಗಿ ಕೇಸರಿ ಎಂಬ ವಾನರಶ್ರೇಷ್ಠನಿಂದ ಅಂಜನಾದೇವಿಯಲ್ಲಿ ಅವತರಿಸಿದನು. ದೇವತೆಗಳಿಂದ ಪೂಜಿಸಲ್ಪಟ್ಟ ಮಹಾತ್ಮ್ಯವುಳ್ಳ ಹನುಮಂತನು ಭಗವಂತನ ಆದೇಶದಂತೆ ಲಂಕಾ ಪಟ್ಟಣದಲ್ಲಿರುವ ಸೀತೆಗೆ ಸಂದೇಶವನ್ನು ಕೊಡಲು ಸಮುದ್ರವನ್ನು ಉಲ್ಲಂಘಿಸಿದನು. ಬಳಿಕ ರಾಮನ ಜೊತೆಗೂಡಿ ಸೇತುವೆಯ ಮೂಲಕ ಲಂಕೆಯನ್ನು ಪ್ರವೇಶಿಸಿದನು. ರಾಮನ ಬಂಟನಾದ ತಾನು ರಾವಣನಿಗೆ ಮುಷ್ಟಿಯಿಂದ ಬಲಿಷ್ಠವಾದ ಏಟನ್ನು ಕೊಟ್ಟು ನಜ್ಜುಗುಜ್ಜಾಗಿ ಮಾಡಿದನು. ಕಪಿಗಳೆಲ್ಲರೂ ಮೂರ್ಛಿತರಾಗಿ ರಣರಂಗದಲ್ಲಿ ಬಿದ್ದಿರಲು ಗಂಧಮಾದನ ಪರ್ವತವನ್ನು ತಂದು ಅವುಗಳನ್ನು ಬದುಕಿಸಿದನು. ಶ್ರೀರಾಮನು ರಾವಣನನ್ನು ಸಂಹರಿಸಿದ ಬಳಿಕ ಅಯೋಧ್ಯೆಗೆ ಆಗಮಿಸಲು ಹನುಮಂತನು ಅತ್ಯಂತ ಕರುಣಾ ಸಂಪನ್ನನಾದ ಸೀತಾಸಹಿತನಾದ ರಾಮನನ್ನು ಪೂಜಿಸಿದನು. ಇಂದಿಗೂ ರಾಮನನ್ನು ನಿರಂತರವೂ ಕಿಂಪುರುಷ ಖಂಡದಲ್ಲಿ ನೋಡುತ್ತಾ ಸೇವಿಸುತ್ತಾ ಇರುವ ಮಹಾ ಮುಖ್ಯಪ್ರಾಣನು ನಮ್ಮೆಲ್ಲರನ್ನೂ ರಕ್ಷಿಸಲಿ.

ಭೀಮೋಽಭೂದ್ಯೋ ನ ಭೇದ್ಯಶ್ಚಕಿತರಿಪುಕೃತಾಪತ್ಪ್ರಣೋದೀ ಸಲೀಲಂ
ರಕ್ಷೋಘ್ನಃ ಪ್ರಾಪ್ತಕೃಷ್ಣೋ ಮಖಕೃದುತ ವನೇ ದುಷ್ಟಹಾ ಕೀಚಕಘ್ನಃ ।
ಹತ್ವಾ ದುರ್ಯೋಧನಾದೀನ್ ಸ್ವಪದಮುಪಗತೋ ಯದ್ವಿಷಃ ಕ್ರೋಧತಂತ್ರಾಃ
ಭೂತ್ವಾ ಭೂಮೌ ಕುಶಾಸ್ತ್ರಂ ವ್ಯಧಿಷತಮಣಿಮತ್ಪೂರ್ವಕಾಃ
ಪಾತು ಸೋಽಸ್ಮಾನ್ ॥ ೨ ॥

ಯಾವ ವಾಯುದೇವರು ಭೀಮ ಎಂಬ ಎರಡನೆಯ ಅವತಾರವನ್ನು ಸ್ವೀಕರಿಸಿದರೋ ಅಂತಹ ಭೀಮಸೇನದೇವರು ಶತ್ರುಗಳ ಸೀಳುವಿಕೆ, ಮುರಿಯುವಿಕೆ,

ಗಾಯ ಮಾಡುವಿಕೆ ಮುಂತಾದ ಪ್ರಕ್ರಿಯೆಗಳಿಗೆ ಸಿಲುಕುವವರಲ್ಲ. ಈ ಭೀಮನ ಪರಾಕ್ರಮವನ್ನು ಕಂಡು ಹೆದರಿದ ಶತ್ರುಗಳಾದ ದುರ್ಯೋಧನಾದಿಗಳು ವಿಷಪ್ರಾಶನ ಮಾಡಿಸುವುದೇ ಮೊದಲಾದ ಆಪತ್ತುಗಳನ್ನು ನೀಡಲು ಭೀಮಸೇನನು ಅನಾಯಾಸವಾಗಿ ಈ ಆಪತ್ತುಗಳನ್ನು ದಾಟಿದನು. ಹಿಡಿಂಬಾಸುರ, ಬಕಾಸುರರನ್ನು ಸಂಹರಿಸಿದನು. ಹಿಡಿಂಬ ವನದಲ್ಲಿ ವೇದವ್ಯಾಸದೇವರನ್ನು ಹೊಂದಿ ಅನುಗ್ರಹಕ್ಕೆ ಪಾತ್ರನಾದನು. ಭೀಮಸೇನನು ರಾಜಸೂಯ ಯಾಗವನ್ನು ಮಾಡಿದನು (ಧರ್ಮರಾಜನನ್ನು ನಿಮಿತ್ತವಾಗಿರಿಸಿ). ಅರಣ್ಯದಲ್ಲಿ ಮಣಿಮಂತನೇ ಮೊದಲಾದ ದೈತ್ಯರನ್ನು ಸಂಹರಿಸಿದನು. ಅಜ್ಞಾತವಾಸದಲ್ಲಿ ಉಪಕೀಚಕರ ಸಹಿತವಾಗಿ ಕೀಚಕನನ್ನು ಸಂಹರಿಸಿದನು. ಬಳಿಕ ದುರ್ಯೋಧನನೇ ಮೊದಲಾದವರನ್ನು ಕೊಂದು ತನ್ನ ಲೋಕವನ್ನು ಕುರಿತು ಸೇರಿದನು. ಯಾವ ಭೀಮಸೇನನ ಶತ್ರುಗಳಾದ ಮಣಿಮಂತನೇ ಮೊದಲಾದವರು ಕ್ರೋಧವಶರಾಗಿ ಭಾರತ ಭೂಮಿಯಲ್ಲಿ ಹುಟ್ಟಿ ದುಶ್ಶಾಸ್ತ್ರವನ್ನು ಪುನಃ ರಚಿಸಿದರು. ಅಂತಹ ದುಷ್ಟರನ್ನು ದಮನ ಮಾಡಿದ ಭೀಮಸೇನದೇವರು ನಮ್ಮನ್ನು ರಕ್ಷಿಸಲಿ.

ಅಜ್ಞಾನೋತ್ಸಾದನಾರ್ಥಂ ಸುರವರವಚಸಾ ಸೂಚಿತೋ ರೂಪ್ಯಭರ್ತ್ರಾ
ಜಾತೋ ಮಧ್ಯಾಲಯಾರ್ಯಾದ್ಗುರುಮತಿತಪಸೋ ವಾಸುದೇವಾಭಿಧಾನಃ ।
ಗೋದಾತ್ರೇ ಮೋಕ್ಷದಾತಾ ರಜತಪತಿಪದಾಸೇವಕೋಭೂತಭರ್ತ್ರಾ
ಮಾನ್ಯಃ ಪ್ರಾಣಃ ಕುಲಸ್ಥೈರಪಿನಿಜಸಹಜಾತರ್ಪಿತಃ ಪ್ರೀಯತಾಂ ಮೇ॥ ೩ ॥

ಶಿವಳ್ಳಿ ಎಂಬ ಗ್ರಾಮದ ಸ್ವಾಮಿಯಾದ ಅನಂತಾಸನ ಎಂಬ ಹೆಸರುಳ್ಳ ನಾರಾಯಣನು ಒಬ್ಬ ವ್ಯಕ್ತಿಯ ಮೂಲಕ ಈ ಭೂಮಂಡಲದಲ್ಲಿ ಸರ್ವಜ್ಞನೊಬ್ಬನು ಅವತರಿಸುತ್ತಾನೆ ಎಂದು ತಿಳಿಸಿದನು. ಬಳಿಕ ಪರಮಾತ್ಮನ ಆದೇಶದಂತೆ ದೇವೇಂದ್ರನ ಪ್ರಾರ್ಥನೆಯಂತೆ ಮೂಲರೂಪಿ ಮುಖ್ಯಪ್ರಾಣನು ಜಗತ್ತಿನ ಅಜ್ಞಾನವನ್ನು ಸಂಶಯವನ್ನು ವಿಪರೀತ ಜ್ಞಾನವನ್ನು ಪರಿಹರಿಸಲು ಇಚ್ಛಿಸಿದನು. ಉತ್ಕೃಷ್ಟವಾದ ಜ್ಞಾನ ಮತ್ತು ತಪಸ್ಸುಗಳುಳ್ಳ ಮಧ್ಯಗೇಹ ಭಟ್ಟರೆಂಬ ಬ್ರಾಹ್ಮಣರ ಮನೆಯಲ್ಲಿ ವಾಸುದೇವ ಎಂಬ ಹೆಸರಿನಿಂದ ಅವತರಿಸಿದನು. ಬಳಿಕ ತನಗೆ ಬಾಲ್ಯದಲ್ಲಿ ಹಾಲು ಕುಡಿಯಲು ಕರೆಯುವ ಹಸುವನ್ನು ದಾನ ಮಾಡಿದ ಮೂಡಿಲ್ಲಾಯ ಬ್ರಾಹ್ಮಣನಿಗೆ ಮೋಕ್ಷವನ್ನೇ ಕರುಣಿಸಿದನು. ರಜತಪೀಠಪುರದ ಸ್ವಾಮಿಯಾದ ಅನಂತಾಸನನ ಪಾದಗಳ ವಿಶೇಷವಾದ ಸೇವೆಯನ್ನು ಮಾಡಿದನು. ಉಡುಪಿಯಿಂದ ಪಾಜಕಕ್ಕೆ ಬರುವ ದಾರಿಯಲ್ಲಿ ಅನೇಕ ಭೂತಗಳು ಪೀಡಿಸಿದಾಗ ಆ ಭೂತಗಳಿಂದಲೂ ಗೌರವಕ್ಕೆ ಪಾತ್ರನಾದನು. ವಾಸುದೇವನು ಬೇಯಿಸಿದ ಹುರುಳಿಗಳಿಂದ ಅಕ್ಕನನ್ನು ಸಂತೋಷಪಡಿಸಿದನು. ಇಂತಹ ಮುಖ್ಯಪ್ರಾಣದೇವನು ನನ್ನ ವಿಷಯದಲ್ಲಿ ಪ್ರೀತಿಯನ್ನು ಹೊಂದಲಿ.

ಆನಂದಂ ಮಂದಹಾಸಾಮೃತರಸಕಲಯಾ ಸಂದಧಾನಃ ಪ್ರಜಾನಾಮ್
ಆಸ್ಯೇಂದೋಃ ಶೋಭಮಾನೈರಪಿ ಕಲವಚನೈರ್ಬಾಲಲೀಲಾವಿಲಾಸೈಃ ।
ಗೋಪುಚ್ಛಾಲಂಬನಾದ್ಯೈರ್ವೃಷಪತಿವಿಹಿತಾಪತ್ಪ್ರಣೋದೀ ಪ್ರಣುದ್ಯಾತ್
ಅಜ್ಞಾನಾದ್ಯಾಪದಂ ಮೇ ಸ್ವಯಮಿವ ಭಗವಾನ್ ವಾಸುದೇವೋಸುದೇವಃ ॥ ೪ ॥

ಮುಖವೆಂಬ ಚಂದ್ರನ ಕಿರುನಗೆಯೆಂಬ ಅಮೃತರಸದ ಲೇಪದಿಂದ ಸಮಸ್ತ ಜನರಿಗೆ ಸಂತೋಷವನ್ನುಂಟುಮಾಡುತ್ತಿರುವ ಶೋಭಾಯಮಾನನಾದ, ತೊದಲು ಮಾತುಗಳಿಂದ ಕೂಡಿರುವ, ಎತ್ತಿನ ಬಾಲವನ್ನು ಹಿಡಿದು ಕಾಡಿನ ಪ್ರಾಂಗಣಗಳಲ್ಲಿ ಸಂಚರಿಸುವುದೇ ಮೊದಲಾದ ಕ್ರೀಡೆಗಳಿಂದ, ಅಂಬೆಗಾಲಿಕ್ಕುವುದು, ಏಳುತ್ತಾ ಬೀಳುತ್ತಾ ನಡೆಯುವುದು ಮೊದಲಾದ ಮಕ್ಕಳ ಆಟದ ವಿನೋದಗಳಿಂದಲೂ ಸಜ್ಜನರಿಗೆ ಸಂತೋಷವನ್ನು ಉಂಟುಮಾಡುತ್ತಿರುವ, ತಮ್ಮ ತಂದೆಗೆ ಎತ್ತನ್ನು ಮಾರಿರುವ ರೈತನಿಂದ ತಂದೆಗೆ ಭೋಜನಕ್ಕೆ ಅಡ್ಡಿಪಡಿಸುತ್ತಾನೆಂಬ ತೊಂದರೆ ಬಂದಾಗ ಹುಣಸೆ ಬೀಜಗಳನ್ನು ಕೊಡುವ ಮೂಲಕ ಅಪ್ಪನ ಸಮಸ್ಯೆಯನ್ನು ಪರಿಹರಿಸಿದ, ಷಡ್ಗುಣೈಶ್ವರ್ಯಸಂಪನ್ನನಾದ ಮುಖ್ಯಪ್ರಾಣನ ಅವತಾರನಾದ ವಾಸುದೇವನು ನನ್ನ ಸಂಸಾರದಲ್ಲಿ ಉಂಟಾಗಬಹುದಾದ ಅಜ್ಞಾನ, ದುಃಖ, ವಿಪತ್ತುಗಳನ್ನು ಪರಿಹರಿಸಲಿ.

ಏಕಾಕೀ ಯೋಜನಾಭ್ಯಾಂ ವ್ಯವಹಿತಮಗಮದ್ಯಸ್ತ್ರಿವರ್ಷೋಽಮರೌಕೋ
ಯೋ ಲಾಲ್ಯೋ ಲೋಕಮಾತ್ರಾಸ್ವಲಿಪಿಪರಿಚಯೇ ತಾತವಿಸ್ಮೇರತಾಕೃತ್ ।
ಪ್ರಾಜ್ಞಂಮನ್ಯಂ ಶಿವಾಖ್ಯಂ ಪರಿಷದಿ ಜಿತವಾನ್ ಶಾಖಿನಾಮರ್ಥಮೂಚೇ
ದುರ್ಗಂ ಪಿತ್ರೋಪನೀತಃ ಸುರವರಮಹಿತೋ ಮಹ್ಯತಾಂ ಮೇ ವಚೋಭಿಃ ॥ ೫ ॥

ಮೂರು ವರ್ಷದ ವಯಸ್ಸಿನ ವಾಸುದೇವನೆಂಬ ಮುಖ್ಯಪ್ರಾಣನು, ಒಬ್ಬಂಟಿಗನಾಗಿ ಯಾರ ಸಹಾಯವೂ ಇಲ್ಲದೆ ಎರಡು ಯೋಜನ ದೂರವಿರುವ ಶ್ರೀಹರಿಯ ಸನ್ನಿಧಾನವಿರುವ ದೇವಾಲಯವನ್ನು ಕುರಿತು ಹೋದನೋ, ಯಾವ ಪ್ರಾಣದೇವನು ಪ್ರಪಂಚಕ್ಕೆ ತಾಯಿಯಾದ ದುರ್ಗಾದೇವಿಯಿಂದ ಪಾಲಿಸಲು ಅರ್ಹತೆಯನ್ನು ಪಡೆದನೋ; ತಂದೆಯು ತನಗೆ ಅಕ್ಷರಾಭ್ಯಾಸ ಮಾಡುವ ಸಮಯದಲ್ಲಿ ತಂದೆಗೇ ಆಶ್ಚರ್ಯವಾಗುವಂತೆ ಪ್ರಜ್ಞಾವಂತಿಕೆಯಲ್ಲಿ ಮೆರೆದನೋ, ಯಾವ ವಾಸುದೇವನಾಮಕನಾದ ಮುಖ್ಯಪ್ರಾಣನು, ತಾನೇ ಬುದ್ಧಿವಂತನೆಂದು ತಿಳಿದುಕೊಂಡಿರುವ ಶಿವಭಟ್ಟನೆಂಬ ಪಂಡಿತನನ್ನು ಸಭೆಯಲ್ಲಿ ಜಯಿಸಿದನೋ, ಯಾವ ವಾಸುದೇವನು ಯಾರಿಂದಲೂ ಸುಲಭವಾಗಿ ತಿಳಿಯಲು ಸಾಧ್ಯವಾಗದೇ ಇರುವ ಮರಗಳ ಹೆಸರನ್ನು ಅನಾಯಾಸವಾಗಿ ಹೇಳಿದನೋ, ತಂದೆಯಿಂದ ಉಪನಯನವನ್ನು ಮಾಡಿಸಿಕೊಂಡ ವಾಸುದೇವನು ದೇವಶ್ರೇಷ್ಠರಿಂದಲೂ ಪೂಜಿತ ನಾದನೋ, ಅಂತಹ ಪ್ರಾಣದೇವನು ನನ್ನ ಮಾತುಗಳಿಂದ ಪೂಜಿಸಲ್ಪಡಲಿ.

ಪಾಯಾನ್ಮಾಂ ಯೋ ಭುಜಂಗಂ ಸದರಿಮದಮಯದ್ದ್ರಾಗುಪಾಧ್ಯಾಯಸೇವೀ
ವಿಶ್ವೇಭ್ಯೋ ವೇಗ–ದೂರ–ಪ್ಲವನ–ಜವ–ನಿಯುದ್ಧಾದಿ–ವೀರ್ಯಾತಿಶಾಯೀ ।
ಯೇನಾಸ್ತಾ ಮೂಢಶಂಕಾ ಶ್ರುತಿಶುಚಿವಚಸಾಽಲಂಗುರೋಃ ಶೀರ್ಷಶೂಲಾ
ಸಖ್ಯುರ್ನಾರಾಯಣಜ್ಞೋಽಥ ಯ ಉಪನಿಷದಂ ವ್ಯಾಖ್ಯತಾಸ್ಮೈ ಸುರಾರ್ಥ್ಯಃ ॥ ೬ ॥

ವಾಸುದೇವನು ಸಜ್ಜನರಿಗೆ ಶತ್ರುವಾದ ಅಸುರ ಸ್ವರೂಪಿಯಾದ ಮಣಿಮಂತನೆಂಬ ಸರ್ಪವನ್ನು ಕೂಡಲೇ ನಿಗ್ರಹಿಸಿದನು. ತನಗೆ ವೇದೋಪದೇಶ ಮಾಡಿದ ಗುರುಗಳನ್ನು ಸೇವಿಸುವ ತನ್ನ ಒಡನಾಡಿಗಳಾದ ಎಲ್ಲ ವಿದ್ಯಾರ್ಥಿಗಳಿಗಿಂತಲೂ ಎಲ್ಲ ಆಟಪಾಠಗಳಲ್ಲಿ ಮುಂದಿದ್ದನು. ದೂರಕ್ಕೆ ಹಾರುವುದು, ಓಡುವುದು, ಮಲ್ಲಯುದ್ಧ ಮಾಡುವುದು ಮೊದಲಾದ ಸಾಮರ್ಥ್ಯವನ್ನು ಎಲ್ಲರಿಗಿಂತ ಅತಿಶಯವಾಗಿ ತೋರಿಸಿಕೊಂಡನು. ವಾಸುದೇವನ ಗುರುಗಳು ಇವನು ವೇದವನ್ನು ಸರಿಯಾಗಿ ಓದುತ್ತಿಲ್ಲ ಎಂದು ತಪ್ಪು ತಿಳಿದಾಗ, ತನ್ನ ಶುದ್ಧವಾದ ಮಾತಿನಿಂದ ವೇದಭಾಗಗಳನ್ನು ಚೆನ್ನಾಗಿ ಪಠಿಸಿ ಅವರ ಸಂಶಯವನ್ನು ಪರಿಹರಿಸಿದನು. ವೇದಪಾಠಕ ಗುರುಗಳ ಮಗನ ತಲೆನೋವನ್ನು ತನ್ನ ಬಾಯಿಯ ಗಾಳಿಯಿಂದ ಊದಿ ಪರಿಹರಿಸಿದನು. ಸಮಸ್ತ ವೇದಗಳ ಅಧ್ಯಯನದ ಬಳಿಕ ದೇವತೆಗಳಿಂದ ಪ್ರಾರ್ಥಿಸಲು ಯೋಗ್ಯನಾದ, ನಾರಾಯಣನನ್ನು ಬಲ್ಲವನಾದ ವಾಸುದೇವನು ತನಗೆ ವೇದೋಪದೇಶ ಮಾಡಿದ ಗುರುಗಳಿಗೆ ಐತರೇಯೋಪನಿಷತ್ತನ್ನು ಪಾಠ ಮಾಡಿದನೋ ಅಂತಹ ವಾಸುದೇವನು ನಮ್ಮನ್ನು ರಕ್ಷಿಸಲಿ.

ಸಂನ್ಯಾಸೇ ಬದ್ಧಬುದ್ಧಿಃ ಕೃತಹರಿನಮನಃ ಪಾರ್ಥಪೂಜ್ಯಂ ಯತಿಂ ಪ್ರಾಕ್
ಪ್ರಾಜ್ಞಂ ಗುರ್ವಾಜ್ಞಯಾಲಂ ಸುಗುಣಹರಿವಿದಂ ಸತ್ತಪಸ್ತೃಪ್ತದೇವಮ್ ।
ಪ್ರಾಪ್ತಂ ಸರ್ವಜ್ಞಶಿಷ್ಯಾಖ್ಯವರಮುಪಗತೋ ದ್ವಿಃಸ್ವತಾತಂ ನಿಷೇದ್ಧುಂ
ಪ್ರಾಪ್ತಂ ಚಾನುತ್ತರಂ ಯೋ ವ್ಯಧಿತ ಸಹಜವಾನ್ಮಾತರಂಚಾವತಾನ್ಮಾಮ್ ॥ ೭ ॥

ವಾಸುದೇವನು ಸಂನ್ಯಾಸಾಶ್ರಮವನ್ನು ಸ್ವೀಕರಿಸುವ ವಿಷಯದಲ್ಲಿ ದೃಢವಾದ ನಿಶ್ಚಯವನ್ನು ಹೊಂದಿದ್ದನು. ಇದಕ್ಕಾಗಿ ಭಗವಂತನಿಗೆ ನಮಸ್ಕರಿಸುತ್ತಿದ್ದನು. ಹಿಂದಿನ ಜನ್ಮದಲ್ಲಿ ಪಾಂಡವರು ಅನಂತಾಸನನನ್ನು ಪೂಜಿಸಿದ್ದರು. ತನ್ನ ಗುರುಗಳ ಅಪ್ಪಣೆಯಿಂದ ಗುಣಪೂರ್ಣನಾದ ಹರಿಯನ್ನು ತಿಳಿದಿರುವ, ಉತ್ತಮವಾದ ತಪಸ್ಸಿನಿಂದ ಸಂತುಷ್ಟನಾದ ಅನಂತಾಸನನನ್ನು, ಸರ್ವಜ್ಞರನ್ನೇ ಶಿಷ್ಯರನ್ನಾಗಿ ಪಡೆಯುವಿರಿ ಎಂಬ ವರವನ್ನು ಪಡೆದಿರುವ ಅಚ್ಯುತಪ್ರೇಕ್ಷಾಚಾರ್ಯರೆಂಬ ಸಂನ್ಯಾಸಿಯನ್ನು ಹೊಂದಿದನು. ವಾಸುದೇವನು ಸಂನ್ಯಾಸವನ್ನು ಸ್ವೀಕರಿಸಬಾರದು ಎಂದು ತಂದೆಯಾದ ಮಧ್ಯಗೇಹಭಟ್ಟರು ಎರಡು ಬಾರಿ ತಡೆಯಲು ಬಂದಾಗ ತಂದೆ–ತಾಯಿಯರನ್ನು ಈ ವಿಷಯದಲ್ಲಿ ನಿರುತ್ತರರನ್ನಾಗಿ ಮಾಡಿದನು. ಅಂತಹ ವಾಸುದೇವನು ನನ್ನನ್ನು ಕಾಪಾಡಲಿ.

ಪೂರ್ಣಪ್ರಜ್ಞಾಖ್ಯ ಆಸೀತ್ ಯತಿಕುಲತಿಲಕೋ ಯಃ ಶುಭಾಚಾರ ಈಶ
ಪ್ರತ್ತೋಸ್ಮಾ ಈಶ್ವರಾಜ್ಞಾಗತಸುರಸರಿತಿ ಸ್ನಾನಕೃಜ್ಜೈತ್ರಪತ್ರಃ ।
ದುಷ್ಟದ್ಯಚ್ಛಿಚ್ಚಲೋಕೇ ಪ್ರವಚನಚತುರಃ ಸತ್ಪುರಾಣೇತಿಹಾಸಸ್ಯೋ–
ಕ್ತೌ ಮೇಧಾಪ್ರದರ್ಶೀ ದಿಶತು ಶುಭದೃಶಂ ಮಹ್ಯಮೃಜ್ವಗ್ರಣೀಃ ಸಃ ॥ ೮ ॥

ವಾಸುದೇವನು ಪೂರ್ಣಪ್ರಜ್ಞ ಎಂಬ ಗುರುಗಳು ಇಟ್ಟ ಹೆಸರಿನಿಂದ ಅಲಂಕೃತನಾಗಿ ಸಂನ್ಯಾಸಾಶ್ರಮಕ್ಕೆ ಉಚಿತವಾದ ಮಂಗಳಕರವಾದ ನಡತೆಯನ್ನು ಹೊಂದಿದನು. ಅಚ್ಯುತಪ್ರೇಕ್ಷಾಚಾರ್ಯರ ಬಳಿ ಪೂರ್ಣಪ್ರಜ್ಞರು ಬದರಿಗೆ ಗಂಗಾಸ್ನಾನಕ್ಕಾಗಿ ತೆರಳುತ್ತೇನೆ ಎಂದು ಹೇಳಿದಾಗ ಶಿಷ್ಯನ ವಿರಹವನ್ನು ಸಹಿಸಲಾರದೆ ಅನಂತಾಸನನಲ್ಲಿ ಗುರುಗಳು ಮೊರೆ ಇಟ್ಟರು. ಆ ಸಂದರ್ಭದಲ್ಲಿ ಉಡುಪಿಯ ಸ್ವಾಮಿಯಾದ ಅನಂತಾಸನ ದೇವರು ಇನ್ನು ಮೂರನೆಯ ದಿನದಲ್ಲಿ ಗಂಗೆಯು ಬರುತ್ತಾಳೆ. ಪೂರ್ಣಪ್ರಜ್ಞರೇ ಹೋಗದಿರಿ ಎಂದು ಅಪ್ಪಣೆ ಮಾಡಿದಾಗ ಭಗವಂತನ ಆದೇಶದಂತೆ ಮಧ್ವತೀರ್ಥಕ್ಕೆ ಆಗಮಿಸಿದ ದೇವಗಂಗಾನದಿಯಲ್ಲಿ ಎಲ್ಲರೂ ಸ್ನಾನವನ್ನು ಮಾಡಿದರು. ಬಳಿಕ ಪೂರ್ಣಪ್ರಜ್ಞರು ಅನೇಕ ಜಯ ಸೂಚಕವಾದ ಪತ್ರವನ್ನು ಹೊಂದಲು ಅರ್ಹತೆಯುಳ್ಳವನೆಂಬುದನ್ನು ಪೂರ್ಣಪ್ರಜ್ಞರ ಖ್ಯಾತಿಯನ್ನು ಬಲಗೊಳಿಸಲು ಅಚ್ಯುತಪ್ರೇಕ್ಷಾಚಾರ್ಯರು ಮಾಯಾವಾದಿಗಳ ಶ್ರೇಷ್ಠ ಗ್ರಂಥವೆನಿಸಿದ ಇಷ್ಟಸಿದ್ಧಿ ಗ್ರಂಥವನ್ನು ಪಾಠ ಹೇಳಿದರು. ಪೂರ್ಣಪ್ರಜ್ಞರು ಈ ಗ್ರಂಥದಲ್ಲಿ ಮೊದಲನೆಯ ಮಂಗಳಪದ್ಯದಲ್ಲಿಯೇ ಮೂವತ್ತೆರಡು ದೋಷಗಳನ್ನು ತೋರಿಸಿ ಅಸದ್ಗ್ರಂಥವನ್ನು ಖಂಡಿಸಿದರು. ಇದರಂತೆ ಉತ್ಕೃಷ್ಟವಾದ ಭಾಗವತ, ಪುರಾಣ, ಇತಿಹಾಸ ಗ್ರಂಥಗಳನ್ನು ಪ್ರವಚನ ಮಾಡುವ ಕೌಶಲತೆಯನ್ನು ತೋರಿಸಿದರು. ಋಜು ಯೋಗಿಶ್ರೇಷ್ಠರಾದ ಪೂರ್ಣಪ್ರಜ್ಞರು ನನಗೆ ಒಳ್ಳೆಯ ಜ್ಞಾನವನ್ನು ಕೊಡಲಿ.

ಸಾಕ್ಷಾದಾನಂದತೀರ್ಥೋಽನುಮಿತಿಭಿರುರುಜಿದ್ಯೋನುಮಾತೀರ್ಥನಾಮಾ
ಬುದ್ಧ್ಯಬ್ಧಿಂ ವಾದಿಸಿಂಹಂ ಸಪದಿವಿಜಿತವಾನ್ ದುಷ್ಟಭಾಷ್ಯಾಪನೋದೀ ।
ಅಚ್ಛೇದ್ಯೋಕ್ತಿಃ ಪ್ರಮೋದಂ ಪಿತುರಪಿಕೃತವಾನ್ ನರ್ಮಗರ್ಭಂ ಗುರೂಕ್ತೋ
ಭಾಷ್ಯಂ ಕರ್ತುಂ ಹ್ಯವೋಚತ್ ಪ್ರಿಯಸಖಯತಯೇ ಸೂತ್ರಭಾವಂ
ಸ ಮಾಽವ್ಯಾತ್ ॥ ೯ ॥

ಪೂರ್ಣಪ್ರಜ್ಞರು ಸಾಕ್ಷಾತ್ ಆನಂದತೀರ್ಥ ಎಂಬ ಹೆಸರನ್ನು ಹೊಂದಿದರು. ಉತ್ತಮವಾದ ತಾರ್ಕಿಕ ಪ್ರಕ್ರಿಯೆಗಳನ್ನು ಜಯಿಸಿದುದರಿಂದ ಅನುಮಾನತೀರ್ಥ ಎಂಬ ಹೆಸರನ್ನು ಹೊಂದಿದರು. ಬುದ್ಧಿಸಾಗರ, ವಾದಿಸಿಂಹ ಎಂಬ ಪಂಡಿತರನ್ನು ಅನಾಯಾಸವಾಗಿ ಜಯಿಸಿದರು. ಪೂರ್ಣಪ್ರಜ್ಞರನ್ನು ಯಾರಿಂದಲೂ ಖಂಡಿಸಲು ಸಾಧ್ಯವಾಗಲಿಲ್ಲ. ದೋಷದಿಂದ ಕೂಡಿರುವ ಸಂಕರನ ಭಾಷ್ಯವನ್ನು ಖಂಡಿಸಿ,

ತಿರಸ್ಕರಿಸಿದರು. ಇವರ ಈ ಜ್ಞಾನದ ಪ್ರಭೆಯಿಂದ ತಂದೆಯಾದ ಮಧ್ಯಗೇಹಭಟ್ಟರು ಸಂತೋಷವನ್ನು ಹೊಂದಿದರು. ಗುರುಗಳಾದ ಅಚ್ಯುತಪ್ರೇಕ್ಷಾಚಾರ್ಯರು, ಆಕ್ಷೇಪಸಹಿತವಾಗಿ ಸೂತ್ರಭಾಷ್ಯವನ್ನು ಮಾಡು ಎಂದು ಹೇಳಿದಾಗ ಪ್ರೀತಿಯ ಸ್ನೇಹಿತನಾದ ಸಂನ್ಯಾಸಿಗೋಸ್ಕರ ಬ್ರಹ್ಮಸೂತ್ರದ ಸರಿಯಾದ ತಾತ್ಪರ್ಯವನ್ನು ಬೋಧಿಸಿದರು. ಇಂತಹ ಪೂರ್ಣಪ್ರಜ್ಞರು ನಮ್ಮನ್ನು ಕಾಪಾಡಲಿ.

ಯಾಮ್ಯಾಶಾಂ ಯಾನ್ ಪ್ರಭೋಕ್ತಾ ಬಹುಫಲಸಮಿತೇಃ ಕ್ಷೀರಿಣೀಂ
ಪ್ರೇಕ್ಷ್ಯ ಯಾಂತೀಂ
ಸ್ಯಾನಂದೂರಂ ಚ ದೈತ್ಯಂ ಸಪದಿ ವಿಜಿತವಾನ್ ಫಾಲ್ಗುಣಂ ತೀರ್ಥಮಾಪ್ತಃ ।
ಸೇತುಂ ಚಾತ್ರಾಪಿಹಾಸ್ಯಂ ಖಲಮಥಕೃತವಾನ್ ಸರ್ವಜಿದ್ರಂಗನಾಥಮ್
ನತ್ವಾ ಯಾನ್ವಿಶ್ವವಂದ್ಯೋ ಹ್ಯುಪನದಿ ವಿಭುಧೌಕಸ್ಯವೇನ್ಮಾಂ ಸ ಧನ್ಯಃ ॥ ೧೦ ॥

ಪೂರ್ಣಪ್ರಜ್ಞರು ದಕ್ಷಿಣದಿಕ್ಕಿನ ಕಡೆ ಹೋಗುತ್ತಿರುವ ಪ್ರಸಂಗದಲ್ಲಿ ಅನೇಕ ಬಾಳೆಹಣ್ಣುಗಳ ಸಮೂಹವನ್ನು ನೀಡಿದಾಗ ಅವೆಲ್ಲವನ್ನೂ ಊಟವಾದ ಬಳಿಕ ಸ್ವೀಕರಿಸಿದರು. ವೇಗವಾಗಿ ಹರಿಯುತ್ತಿರುವ ಪಯಸ್ವಿನಿ ನದಿಯನ್ನು ನೋಡಿ ಮುಂದೆ ದುರ್ಗೆಯು ಇಲ್ಲಿ ಅವತರಿಸುತ್ತಾಳೆ ಎಂದು ತಿಳಿಸಿದರು. ಕೇರಳದ ಅನಂತಶಯನದಲ್ಲಿ ಅಸುರನಾದ ಸಂಕರನನ್ನು ಕೂಡಲೇ ಜಯಿಸಿದರು. ಕನ್ಯಾಕುಮಾರಿ ಎಂಬ ತೀರ್ಥವನ್ನು, ರಾಮಸೇತುವನ್ನು ಹೊಂದಿದರು. ಆ ರಾಮಸೇತುವಿನಲ್ಲೂ ಯಾರಿಂದಲೂ ಜಯಿಸಲಾಗದ ದುಷ್ಟನಾದ ಸಂಕರನನ್ನು ಅಪಹಾಸಕ್ಕೆ ಗುರಿ ಪಡಿಸಿದನು. ಎಲ್ಲರನ್ನೂ ಜಯಿಸಿದರು. ಬಳಿಕ ಅಲ್ಲಿಂದ ಕಾವೇರಿ ನಿವಾಸಿಯಾದ ಶ್ರೀರಂಗನಾಥಸ್ವಾಮಿಯನ್ನು ನಮಸ್ಕರಿಸಿ ಎಲ್ಲರಿಂದಲೂ ಸ್ತುತಿಸಲ್ಪಟ್ಟರು. ಬಳಿಕ ಪೂರ್ಣಪ್ರಜ್ಞರು ಉತ್ತರ ದಿಕ್ಕಿಗೆ ಪ್ರಯಾಣವನ್ನು ಬೆಳೆಸುತ್ತಾ ನದಿಯ ಸಮೀಪದ ದೇವಾಲಯಗಳಲ್ಲಿ ವಾಸಿಸಿದರು. ಅಂತಹ ಪೂರ್ಣಪ್ರಜ್ಞರು ನನ್ನನ್ನು ರಕ್ಷಿಸಲಿ.

ವಿಶ್ವಾದೀನಾಂ ಶತಾರ್ಥಪ್ರವಚನಚತುರೋ ದಾನಸೂಕ್ತಾರ್ಥವಾದೀ
ದಿವ್ಯಜ್ಞಾನಪ್ರಕಾಶೀ ಸಕಲಜಿದಖಿಲಜ್ಞಾಭಿಧಃ ಪ್ರಾಪ್ತರೂಪ್ಯಃ ।
ಭೀಮೋ ವಾ ಭೀಮಸಂಧಃ ಖಲಕುಲದಮನೇ ಗೀತಿಕಾಭಾಷ್ಯಕಾರೀ
ಗುರ್ವರ್ಚೀ ಯಾನುದೀಚೀಂ ಮಮ ಮನಸಿಲಸೇತ್ತೀರ್ಥಶೋಧೀ ಸ ಮಧ್ವಃ ॥ ೧೧ ॥

ವಿಷ್ಣುಸಹಸ್ರನಾಮದಲ್ಲಿರುವ ವಿಶ್ವ ಮುಂತಾದ ಪದಗಳಿಗೆ ನೂರು ಅರ್ಥಗಳನ್ನು ಪೂರ್ಣಪ್ರಜ್ಞರು ಹೇಳಿದರು. ಅನ್ನದಾನ ಪ್ರಶಂಸೆಯನ್ನು ಮಾಡುವ 'ನ ವಾ ಉ ದೇವಾಃ' ಮೊದಲಾದ ಸೂತ್ರದ ಅರ್ಥಗಳನ್ನು ಹೇಳಿದರು. ಕನ್ಯೆಗೆ ಇಂದ್ರನು

ಕಾಂತಿದಾನ ಮಾಡಿದ 'ಕನ್ಯಾ ವಾರವಾಯತಿ' ಎಂಬ ಸೂಕ್ತದ ಅರ್ಥವನ್ನು ಹೇಳಿದರು. ಈ ಅರ್ಥಗಳನ್ನು ಹೇಳಿದ ಬಳಿಕ ಅಲೌಕಿಕವಾದ ಜ್ಞಾನವನ್ನು ಶಿಷ್ಯರಿಗೆ ತೋರಿಸಿದರು. ವೇದಶಾಸ್ತ್ರಜ್ಞರಾದ ಎಲ್ಲ ವಾದಿಗಳನ್ನೂ ಜಯಿಸಿದರು. ಎಲ್ಲರೂ ಪೂರ್ಣಪ್ರಜ್ಞರನ್ನು ಸರ್ವಜ್ಞರು ಎಂದು ಪ್ರಶಂಸಿಸಿದರು. ಪ್ರಯಾಣದಿಂದ ಉಡುಪಿಗೆ ಹಿಂದಿರುಗಿ ಬಂದಿರುವ ಪೂರ್ಣಪ್ರಜ್ಞರು ದುರ್ವಾದಿಗಳ ಸಮೂಹವನ್ನು ಸೋಲಿಸುವ ವಿಷಯದಲ್ಲಿ ಭೀಮಸೇನದೇವರಂತೆ ಪ್ರತಿಜ್ಞೆಯನ್ನು ಹೊಂದಿದ್ದರು. ಭಗವದ್ಗೀತಾ ಭಾಷ್ಯವನ್ನು ರಚಿಸಿದರು. ಗುರುಗಳಾದ ಅಚ್ಯುತಪ್ರೇಕ್ಷಾಚಾರ್ಯರನ್ನು ಪೂಜಿಸಿದರು. ಬಳಿಕ ಉತ್ತರದಿಕ್ಕಿನ ಕಡೆ ಪ್ರಯಾಣವನ್ನು ಬೆಳೆಸುತ್ತಾ ತಮ್ಮ ಸಾನ್ನಿಧ್ಯದಿಂದ ಸ್ನಾನಾದಿಗಳಿಂದ ತೀರ್ಥಕ್ಷೇತ್ರವನ್ನು ಪವಿತ್ರವನ್ನಾಗಿ ಮಾಡಿದರು. ಅಂತಹ ಪೂರ್ಣಪ್ರಜ್ಞರು ನನ್ನ ಮನಸ್ಸಿನಲ್ಲಿ ನಿರಂತರ ಶೋಭಿಸಲಿ.

ಗಂಗಾತಾರೀ ಸುಕರ್ಮೋಪಗತಬದರಿಕಾಂತೋऽತ್ರ ನಾರಾಯಣಂ ಯೋ
ನತ್ವೈಕಾಂತೇ ಸಮುದ್ಯತ್ಪ್ರವಚನಕೃದಥೋ ಸತ್ತಪಾಃ ಕೃಷ್ಣನುನ್ನಃ ।
ಆಪ್ತೇಭ್ಯಃ ಕಾರ್ಯಲೇಖೀ ಸ್ವಮನುಗತನಿಜಪ್ರೇರಕಃ ಪಾಣಿಮಾತ್ರಾನ್
ಮಾರುತ್ಯಾಭಃ ಪ್ರಪಶ್ಯನ್ ಹರಿಮಪಿ ಗಿರಿಣಾ ಸಾರ್ಧಮೃದ್ಧ್ಯೈ
ಸ ಮೇ ಸ್ಯಾತ್ ॥ ೧೨ ॥

ಶ್ರೀಮಧ್ವಾಚಾರ್ಯರು ಗಂಗೆಯನ್ನು ಅನಾಯಾಸವಾಗಿ ದಾಟಿದರು. ಆಶ್ಚರ್ಯಕರವಾದ ಚರಿತ್ರೆಯುಳ್ಳ ಶ್ರೀಮದಾಚಾರ್ಯರು ಬದರಿಕಾಶ್ರಮವನ್ನು ಪಾದಯಾತ್ರೆಯ ಮೂಲಕ ಸೇರಿದರು. ಬದರಿಕಾಶ್ರಮದಲ್ಲಿರುವ ನಾರಾಯಣನನ್ನು ನಮಸ್ಕರಿಸಿ ಏಕಾಂತಪ್ರದೇಶದಲ್ಲಿ ಚೆನ್ನಾಗಿ ರಚಿಸಲ್ಪಟ್ಟ ಗೀತಾಭಾಷ್ಯದ ಪ್ರವಚನವನ್ನು ದೇವರ ಮುಂದೆ ಸಮರ್ಪಣೆ ಮಾಡಿದರು. ಬಳಿಕ ಉತ್ಕೃಷ್ಟವಾದ ಕಾಷ್ಠಮೌನವೆಂಬ ಉಪವಾಸವನ್ನು ಮಾಡಿದರು. ವೇದವ್ಯಾಸದೇವರಿಂದ ಪ್ರೇರಿತರಾಗಿ ತಮ್ಮ ಶಿಷ್ಯರುಗಳಿಗೆಲ್ಲ ನಾವು ವೇದವ್ಯಾಸಾಶ್ರಮಕ್ಕೆ ಹೋಗುತ್ತಿದ್ದೇವೆ. ನೀವು ಇಲ್ಲಿಯೇ ಇರಿ. ನಾನು ಹೇಳಿದ ಕರ್ತವ್ಯಗಳನ್ನು ನಿರ್ವಹಿಸಿ ಎಂದು ಹೇಳಿ ಊರ್ಧ್ವಬದರಿಗೆ ಹೊರಟರು. ಗುರುಗಳ ವಿರಹವನ್ನು ಸಹಿಸಲಾಗದಿರುವ ಸತ್ಯತೀರ್ಥರು ಪೂರ್ಣ ಪ್ರಜ್ಞರನ್ನು ಅನುಸರಿಸಿದಾಗ ಮುಂದೆ ನಡೆಯಲು ಅಸಮರ್ಥರಾದ ಇವರನ್ನು ಕೇವಲ ತಮ್ಮ ಕೈಸನ್ನೆಯಿಂದಲೇ ಅನಂತಮಠಕ್ಕೆ ಮುಹೂರ್ತಕಾಲಕ್ಕೆ ಹೋಗುವಂತೆ ಮಾಡಿದರು. ವಾಯುಪುತ್ರನಾದ ಹನುಮಂತನಂತೆ ಕಾಂತಿಯುಳ್ಳ ಭೀಮಸೇನನ ಕಾಂತಿಯಂತೆ ಕಾಂತಿಯುಳ್ಳ ಪೂರ್ಣಪ್ರಜ್ಞರು ಪರ್ವತದಿಂದ ಪರ್ವತಕ್ಕೆ ಹಾರುತ್ತಾ ಊರ್ಧ್ವಬದರಿಯಲ್ಲಿರುವ ನಾರಾಯಣನನ್ನು ಹೊಂದಿದರು. ಅಂತಹ ಶ್ರೀಮದಾಚಾರ್ಯರು ನನ್ನ ಅಭಿವೃದ್ಧಿಗೋಸ್ಕರ ಇರಲಿ.

ಯೋऽಪಶ್ಯತ್ ಸ್ವಾಶ್ರಮಾಗ್ರ್ಯಂ ಮುನಿಮಹಿತಗುಣೋ ದಿವ್ಯಸಾಲಂ ಚ ಚಿತ್ರಂ
ತತ್ರರ್ಷೀಣಾಂ ಸಮಾಜೇ ಹರಿಮಪಿ ಮುನಿತಃ ಸತ್ಯವತ್ಯಾಂ ಪ್ರಜಾತಮ್ ।
ಕರ್ತಾರಂ ಭಾರತಾದೇರ್ಭರತವರಗುರುಂ ಬ್ರಹ್ಮಸೂತ್ರಸ್ಯ ಚಾಹೋ
ನಿರ್ದೋಷಂ ನಿತ್ಯಪೂರ್ಣಾಗಣಿತಗುಣಮಸೌ ಪ್ರೀಯತಾಂ ಮೇ ಸ ಚೇಶಃ ॥ ೧೩ ॥

ಪೂರ್ಣಪ್ರಜ್ಞರು ಅತ್ಯಂತ ಶೋಭಾಯಮಾನವಾದ ಬದರಿಕಾಶ್ರಮವನ್ನು ನೋಡಿದರು. ಬದರಿಕಾಶ್ರಮದಲ್ಲಿರುವ ವೇದವ್ಯಾಸರ ಪರಿವಾರದವರಾದ ಮುನಿ ಗಳಿಂದ ಪೂಜಿತರಾದರು. ಮಂಗಳಕರವಾದ ಧರ್ಮಗಳುಳ್ಳವರಾಗಿದ್ದರು. ನಾನಾ ಬಣ್ಣಗಳಿಂದ ಕೂಡಿರುವ ಲೋಕವಿಲಕ್ಷಣವಾದ ಸಾಲವೃಕ್ಷವನ್ನು ನೋಡಿದರು. ಆ ವೃಕ್ಷಗಳ ಸಮುದಾಯದ ನಡುವೆ ಬದರೀವೃಕ್ಷದ ಕೆಳಗೆ ಋಷಿಗಳ ಸಮೂಹದಲ್ಲಿ ಪರಾಶರ ಮುನಿಗಳಿಂದ ಸತ್ಯವತಿಯಲ್ಲಿ ಅವತರಿಸಿರುವ ಮಹಾಭಾರತವೇ ಮೊದಲಾದ ಇತಿಹಾಸಗಳನ್ನು, ಹದಿನೆಂಟು ಪುರಾಣಗಳನ್ನು, ಬ್ರಹ್ಮಸೂತ್ರವನ್ನು ರಚಿಸಿರುವ ಭರತವಂಶೋತ್ಪನ್ನರಲ್ಲಿ ಶ್ರೇಷ್ಠರಾದ ಪಾಂಡವರಿಗೆ ಹಿತೋಪದೇಶವನ್ನು ಮಾಡಿದ ಸಮಸ್ತ ದೋಷಗಳಿಂದ ದೂರನಾದ, ಪೂರ್ಣಗುಣಗಳಿಂದ ತುಂಬಿರುವ, ಯಾವ ನ್ಯೂನತೆಯೂ ಇಲ್ಲದ, ಕೊನೆಯಿಲ್ಲದ, ಕಲ್ಯಾಣಗುಣಗಳ ಸ್ವರೂಪಿಯಾದ ವೇದವ್ಯಾಸರೂಪಿಯಾದ ನಾರಾಯಣನನ್ನು ಶ್ರೀಮದಾಚಾರ್ಯರು ನೋಡಿದರು. ಇದು ಆಶ್ಚರ್ಯವು. ಇಂತಹ ಮಧ್ವಾಚಾರ್ಯರ ಸ್ವಾಮಿಯಾದ ವೇದವ್ಯಾಸರು ನನ್ನ ವಿಷಯದಲ್ಲಿಯೂ ಸಂತುಷ್ಟರಾಗಲಿ.

ಸರ್ವಾಂಗೈಃ ಸರ್ವವಂದ್ಯೈರ್ವಿಮಲಕುವಲಯಶ್ಯಾಮಲೈಃ ಶೋಭಮಾನಂ
ಸಜ್ಞಾನಾನಂದತೇಜಃ ಪ್ರವರಗುಣಮಯೈಃ ಪೂರ್ಣಲಾವಣ್ಯರೂಪೈಃ ।
ಬಿಂಬೋಷ್ಠಂ ಪದ್ಮಪಾದಂ ಶುಭಕಪಿಶಜಟಂ ಸೈಣಚರ್ಮಾಣಮೀಶಮ್
ದೃಷ್ಟ್ವಾ ನತ್ವೋಪಗೂಢಃ ಸ ಗುರುರವತು ನಃ ಸೂಪವಿಷ್ಟೋ ಮುನೀಷ್ಟಃ ॥ ೧೪ ॥

ಲಕ್ಷ್ಮೀ ಮೊದಲಾದ ಸಮಸ್ತದೇವತೆಗಳಿಂದ ಸ್ತುತಿಸಿಕೊಳ್ಳುವ ನಿರ್ಮಲವಾದ ಕೆನ್ನೈದಿಲೆ ಹೂವುಗಳಂತೆ ಶ್ಯಾಮಲವರ್ಣದಿಂದ ಕೂಡಿರುವ ಎಲ್ಲ ವಿಷಯ-ಗಳಲ್ಲಿಯೂ ಸ್ವರೂಪಭೂತವಾದ ಜ್ಞಾನವನ್ನು ಹೊಂದಿರುವ ಜ್ಞಾನಸ್ವರೂಪಿಗಳಾದ, ಸುಖಸ್ವರೂಪಿಗಳಾದ, ಸೌಂದರ್ಯಾದಿ ಅನಂತಗುಣಗಳ ನಿಧಿಯಾದ, ಸೌಂದರ್ಯ ಸ್ವರೂಪರಾದ ಕೈಕಾಲು ಮೊದಲಾದ ಸಮಸ್ತ ಅವಯವಗಳಿಂದ ಶೋಭಿಸುತ್ತಿರುವ, ಪಕ್ವವಾದ ತೊಂಡೆ ಹಣ್ಣಿನಂತಹ ತುಟಿಯುಳ್ಳ, ತಾವರೆ ಹೂವಿನಂತಹ ಪಾದವುಳ್ಳ, ಮಂಗಳಕರವಾದ ಕೆಂಜಟೆಯುಳ್ಳ, ಜಿಂಕೆಯ ಚರ್ಮದಿಂದ ಸಹಿತರಾದ ಪರಮ ಸಮರ್ಥರಾದ ವೇದವ್ಯಾಸದೇವರನ್ನು ಮಧ್ವಗುರುಗಳು ನೋಡಿ ನಮಸ್ಕರಿಸಿದರು. ವೇದವ್ಯಾಸರು ಮಧ್ವರನ್ನು ಆಲಂಗಿಸಿದರು. ವೇದವ್ಯಾಸರ ಅಪ್ಪಣೆಯಂತೆ

ಮುನಿಗಳಿಂದ ಕೊಡಲ್ಪಟ್ಟ ಆಸನದಲ್ಲಿ ಮಧ್ವಗುರುಗಳು ಕುಳಿತು ಕೊಂಡರು. ವೇದವ್ಯಾಸರಿಂದ ಆಲಂಗಿಸಲ್ಪಟ್ಟ ಮುನಿಗಳಿಗೆ ಪ್ರಿಯರಾದ ಪೂರ್ಣಪ್ರಜ್ಞರು ನಮ್ಮನ್ನು ಕಾಪಾಡಲಿ.

ಶಿಷ್ಯಂ ವ್ಯಾಸಸ್ಯ ನಾರಾಯಣಮಥ ಚ ಗತಂ ಸರ್ವಹೇತುಂ ಸುಮತ್ಸ್ಯಂ
ಸಾಶ್ವಾಸ್ಯಂ ಕೂರ್ಮಕೋಲೌ ನೃಹರಿಮಥಮನುಂ ವಾಮನಂ ಬುದ್ಧರಾಮೌ ।
ವ್ಯಾಸಂ ಕಾಕುತ್ಸ್ಥಕೃಷ್ಣಾವತಿಚಿರಮಿತರಾನಂದನಂ ಕಲ್ಕಿಯಜ್ಞೌ
ಸಿದ್ಧೇಶಂ ನೌಮಿ ಧನ್ವಂತರಿವರವನಿತಾಖ್ಯಂ ತಮೇನಂ ಸ್ಮರಂತಮ್ ॥ ೧೫ ॥

ವೇದವ್ಯಾಸರ ಶಿಷ್ಯರಾದ ಪೂರ್ಣಪ್ರಜ್ಞರು, ವೇದವ್ಯಾಸರಿಂದ ಉಪದೇಶವನ್ನು ಪಡೆದ ಬಳಿಕ ಧರ್ಮಪುತ್ರನಾದ ನಾರಾಯಣದೇವರನ್ನು ಹೊಂದಿದರು. ಶ್ರೀಮನ್ನಾರಾಯಣನು ಜಗತ್ತಿಗೆ ಆಶ್ರಯನಾಗಿದ್ದಾನೆ. ಸುಂದರವಾದ ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಬುದ್ಧ, ಪರಶುರಾಮ, ರಾಮ, ಕೃಷ್ಣ, ವೇದವ್ಯಾಸ ಮುಂತಾದ ರೂಪಗಳನ್ನು ಹೊಂದಿದ್ದಾನೆ. ಇದರಂತೆ ಮಹಿದಾಸ ರೂಪವನ್ನೂ ಹೊಂದಿರುತ್ತಾನೆ. ಕಲ್ಕಿ, ಯಜ್ಞ, ಕಪಿಲ, ಧನ್ವಂತರಿ, ಮೋಹಿನೀ ಎಂಬ ಅವತಾರಗಳನ್ನು ಹೊಂದಿದ್ದಾನೆ. ಇಂತಹ ಅವತಾರಗಳಿಂದ ಅಭಿನ್ನನಾದ ನಾರಾಯಣನನ್ನು ಧ್ಯಾನಿಸುತ್ತಿರುವ ಮಧ್ವಾಚಾರ್ಯರನ್ನು ನಾನು ಸ್ತುತಿಸುತ್ತೇನೆ.

ದತ್ತಾತ್ರೇಯಂ ಕುಮಾರಂ ಹೃದಿ ದಧದೃಷಭಂ ಹಂಸಕೃಷ್ಣೌ ಹರಿಂ ತಂ
ಧಾರ್ಮಂ ನಾರಾಯಣಾಖ್ಯಂ ಸದಶಶತಸಹಸ್ರಾದ್ಯನಂತಾವತಾರಮ್ ।
ತನ್ನುನ್ನಸ್ತತ್ತ್ವಸೂಕ್ತ್ಯೈರ್ವರಮುಚಿತನರೈರೇವ ಸೇವ್ಯತ್ವಮಾಪ್ತಃ
ಕೃಚ್ಛ್ರಾದ್ಯಾತ್ರೋನ್ಮುಖೋ ಮೇ ಸ ಗತಿರಪಿ ಹರಿರ್ವ್ಯಾಸನಾರಾಯಣಾಖ್ಯಃ ॥ ೧೬ ॥

ಪೂರ್ಣಪ್ರಜ್ಞರು ಶ್ರೀಹರಿಯ ರೂಪಗಳೆನಿಸಿದ ದತ್ತಾತ್ರೇಯ, ಸನತ್ಕುಮಾರ, ವೃಷಭ, ಹಂಸ, ಕೃಷ್ಣ, ನಾರಾಯಣ, ಹರಿ ಮುಂತಾದ ಅವತಾರವನ್ನು, ಮತ್ಸ್ಯಾದಿ ದಶಾವತಾರಗಳನ್ನು, ನಾರಾಯಣಾದಿ ಶತ ಅವತಾರಗಳನ್ನು, ವಿಶ್ವಾದಿ ಸಹಸ್ರಾವತಾರಗಳನ್ನು ಅಜಿತಾದಿ ಅನಂತ ರೂಪಗಳನ್ನು ಹೊಂದಿರುವ ಧರ್ಮಪ್ರಜಾಪತಿಯ ಮಗನಾದ ನಾರಾಯಣನೆಂಬ ಹೆಸರುಳ್ಳ ಪರಮಾತ್ಮನನ್ನು ಮನಸ್ಸಿನಲ್ಲಿ ಧರಿಸಿಕೊಂಡು ಯಾವಾಗಲೂ ಸ್ತುತಿಸುತ್ತಾರೆ. ಪರಾತ್ಪರ ವಸ್ತುಗಳ ಸರಿಯಾದ ನಿರೂಪಣೆಗೋಸ್ಕರ ಮಧ್ವಗುರುಗಳು ನಾರಾಯಣನಿಂದ ಪ್ರೇರಿತ ರಾಗಿದ್ದಾರೆ. ಮುಕ್ತಿಯೋಗ್ಯರಾದ ಸಾತ್ವಿಕ ಅಧಿಕಾರಿ ಜೀವರಿಂದ ಸೇವಿಸುವ ಅರ್ಹತೆಯನ್ನು ಹೊಂದಿದ್ದಾರೆ. ಇಂತಹ ಮಧ್ವಗುರುಗಳು ನಾರಾಯಣ ದೇವರು 'ಪುನಃ ನೀನು ಭೂಮಿಗೆ ಹೋಗಿ ತತ್ತ್ವೋಪದೇಶವನ್ನು ಮಾಡು' ಎಂದು ಹೇಳಿದಾಗ

ಅವರ ವಿರಹವನ್ನು ಸಹಿಸಲಾಗದಿದ್ದರೂ ಕಷ್ಟದಿಂದ ದಕ್ಷಿಣ ದಿಕ್ಕನ್ನು ಕುರಿತು ಪ್ರಯಾಣ ಮಾಡಿದರು. ಅಂತಹ ಗುರುಗಳಾದ ಮಧ್ವರು ವೇದವ್ಯಾಸ ನಾರಾಯಣ ರೂಪಿಯಾದ ಹರಿಯೂ ಕೂಡ ನನಗೆ ಗತಿಯಾಗಿರಲಿ.

ಲಬ್ಧ್ವಾನುಜ್ಞಾಂ ಮುಕುಂದಾತ್ಸ್ವಜನಮುಪಗತೋಽನೇಕಭಿಕ್ಷಾಪ್ರಭೋಕ್ತಾಽ
ತುಲ್ಯಂ ಭಾಷ್ಯಂ ಚ ಕುರ್ವನ್ ಸ್ವಸಮಗುಣಗಣಂ ಸಂಪ್ರಯಾತಃ ಪುನರ್ಯಾನ್।
ಷಟ್‌ಶಾಸ್ತ್ರಾಶೇಷಶಾಖಾಸ್ವಖಿಲವಿಜಯವಾನ್ ಶೋಭನಂ ಸೂರಿವರ್ಯಂ
ಶಿಷ್ಯಂ ಲಬ್ಧ್ವಾಽತಿಜೈತ್ರಂ ಪುನರಪಿ ವಿವಿಧಾನ್ ಪ್ರಾಪ್ತರೂಪ್ಯೋ ಗತಿರ್ಮೇ ॥ ೧೭ ॥

ಮಧ್ವಗುರುಗಳು ವೇದವ್ಯಾಸರಿಂದ ಅಪ್ಪಣೆಯನ್ನು ಪಡೆದು ಅಣುಬದರಿಕಾ ಆಶ್ರಮದಲ್ಲಿ (ಇವತ್ತಿನ ಬದರಿಕಾಶ್ರಮ) ಶಿಷ್ಯರನ್ನು ಬಂದು ನೋಡಿದರು. ಬಳಿಕ ಅಗ್ನಿಶರ್ಮನೇ ಮೊದಲಾದ ಆರು ಮಂದಿ ಭಿಕ್ಷೆಗೆ ಬೇಕಾಗುವ ಪದಾರ್ಥಗಳನ್ನು ತಂದುಕೊಟ್ಟಾಗ ಪ್ರೀತಿಯಿಂದ ಅದನ್ನು ಸ್ವೀಕರಿಸಿದರು. ಶ್ರೀಮದಾಚಾರ್ಯರು ಭಗವಂತನ ಅತಿಶಯವಾದ ಗುಣಗಳನ್ನು ಪ್ರಕಾಶಪಡಿಸುವುದು, ಇತರ ಸಿದ್ಧಾಂತಗಳನ್ನು ಖಂಡಿಸುವುದು, ಭಕ್ತರ ಇಷ್ಟಾರ್ಥಗಳನ್ನು ದಯಪಾಲಿಸುವುದು ಮುಂತಾದ ಗುಣಗಳನ್ನು ಅತಿಶಯವಾಗಿ ಹೊಂದಿದ್ದರು. ಬ್ರಹ್ಮಸೂತ್ರಭಾಷ್ಯವನ್ನು ರಚಿಸಿದರು. ಬದರೀಕ್ಷೇತ್ರದಿಂದ ದಕ್ಷಿಣ ದಿಕ್ಕಿನ ಕಡೆ ಪ್ರಯಾಣವನ್ನು ಬೆಳೆಸಿದರು. ದಾರಿಯಲ್ಲಿ ಭಾಟ್ಟ, ಪ್ರಾಭಾಕರ, ವೈಶೇಷಿಕ, ನ್ಯಾಯ, ಬೌದ್ಧ, ಚಾರ್ವಾಕ ಎಂಬ ಆರು ಶಾಸ್ತ್ರಗಳು ಮತ್ತು ಷಡಂಗಗಳು ಇವುಗಳನ್ನು ಅಧ್ಯಯನ ಮಾಡಿದ ಎಲ್ಲ ಪಂಡಿತರನ್ನು ಆಯಾ ಶಾಸ್ತ್ರಗಳಲ್ಲಿ ಪರಾಜಯಗೊಳಿಸಿ ವಿಜಯವನ್ನು ಸಂಪಾದಿಸಿದರು. ಪಂಡಿತಶ್ರೇಷ್ಠರಾದ ಅತ್ಯಂತ ವಿಜಯಶಾಲಿಗಳಾದ ಶೋಭನಭಟ್ಟರೆಂಬ ಶಿಷ್ಯರನ್ನು ಗೋದಾವರಿ ತೀರದಲ್ಲಿ ಪಡೆದು ಪುನಃ ಪುನಃ ಬೇರೆ ಶಿಷ್ಯರನ್ನು ಪಡೆದು ಉಡುಪಿಗೆ ಬಂದು ಸೇರಿದರು. ಇಂತಹ ಮಧ್ವಗುರುಗಳು ನನಗೆ ಗತಿಯಾಗಲಿ.

ಸಖ್ಯೇವ್ಯಾಖ್ಯಾಯ ಭಾಷ್ಯಂ ಕಲಿಮಲಮಪನೀಯಾಚ್ಯುತಜ್ಞಾಯ ಚಾಲಂ
ಕಾರ್ಷ್ಣೀಮರ್ಚಾಮಚಾಲ್ಯಾಂ ತ್ರಿದಶಕತರುಣೈರ್ಲೀಲಯಾಽನೀಯ ರೂಪ್ಯೇ ।
ಆಸ್ಥಾಪ್ಯೋದಸ್ಯ ಯಜ್ಞಪ್ರತಿಹತಿನಿರತಾನ್ ಕಾರಯಿತ್ವಾಸ್ಯ ಯಜ್ಞಂ
ವ್ಯಾಸಂ ನತ್ವಾ ಪುನಶ್ಚ ಪ್ರತಿಗತರಜತಃ ಸಂಪ್ರಸೀದೇತ್ ಸ ಮಧ್ವಃ ॥ ೧೮ ॥

ಮಧ್ವಗುರುಗಳು ಮಿತ್ರನಾದ ಒಬ್ಬ ಜ್ಯೇಷ್ಠ ಯತಿಗಳಿಗೆ ಅದರಂತೆ ತನ್ನ ಗುರುಗಳಾದ ಅಚ್ಯುತಪ್ರೇಕ್ಷಾಚಾರ್ಯರಿಗೂ ಬ್ರಹ್ಮಸೂತ್ರಭಾಷ್ಯವನ್ನು ಪ್ರವಚನ ಮಾಡುವ ಮೂಲಕ ಅವರ ಹೃದಯದಲ್ಲಿ ತುಂಬಿದ ಕಲಿಯ ಮಾಲಿನ್ಯವನ್ನು ಚೆನ್ನಾಗಿ ಪರಿಹರಿಸಿದರು. ಶ್ರೀಕೃಷ್ಣನಿಗೆ ಸಂಬಂಧಪಟ್ಟ ದ್ವಾರಕೆಯಿಂದ ಆಗಮಿಸಿದ

ಪ್ರತೀಕವನ್ನು ಮೂವತ್ತು ಜನರಿಂದಲೂ ಅಲ್ಲಾಡಿಸಲು ಅಸಾಧ್ಯವಾದಾಗ ಮಧ್ವಗುರುಗಳು ಅನಾಯಾಸದಿಂದ ತಂದು ಉಡುಪಿಯಲ್ಲಿ ಪ್ರತಿಷ್ಠಾಪಿಸಿದರು. ತನ್ನ ಪೂರ್ವಾಶ್ರಮದಲ್ಲಿ ಪಾಠ ಹೇಳಿದ ಗುರುಪುತ್ರನು ಮಾಡುವ ಯಜ್ಞಕ್ಕೆ ಅನೇಕರು ವಿಘ್ನವನ್ನು ಉಂಟುಮಾಡುವ ಪ್ರಸಂಗದಲ್ಲಿ ಅವರೆಲ್ಲರನ್ನೂ ನಿರಾಕರಿಸಿ ತನ್ನವನಾದ ಉಪಾಧ್ಯಾಯನ ಪುತ್ರನು ಮಾಡುವ ಯಜ್ಞಕ್ಕೆ ಸಹಕಾರವನ್ನು ನೀಡಿ ಅವನ ಕೈಯಿಂದ ಯಜ್ಞವನ್ನು ಮಾಡಿಸಿದರು. ಪುನಃ ಬದರಿಕಾಶ್ರಮಕ್ಕೆ ಹೋಗಿ ವೇದವ್ಯಾಸರನ್ನು ವಂದಿಸಿದರು. ಪುನಃ ಉಡುಪಿಗೆ ಹಿಂದಿರುಗಿದರು. ಇಂತಹ ಮಧ್ವಗುರುಗಳು ನನ್ನ ವಿಷಯದಲ್ಲಿ ಪ್ರಸನ್ನರಾಗಿರಲಿ.

ಸಾಗಸ್ತ್ವಾದೀಶದೇವಂ ಪರವಶಖನನಂ ಯೋ ವ್ಯಧಾದಪ್ಲವಃ ಸ್ವೈಃ
ಗಂಗಾತಾರೀ ಸ್ವರೀತ್ಯಾ ವಶಿತಯವನರಾಡ್ ವರ್ತ್ಮನಿ ಕ್ವಾಪಿ ಚೋರಾನ್ ।
ಹಂತುಂ ಯಾತಾನ್ ಮಿಥೋಽಹನ್ ಕ್ವಚಿದಪಿ ನಿಜಶಿಷ್ಯೇಣ ಚಾದ್ರಾವಯದ್ದ್ರಾಕ್
ಯೋಗೇನಾಭೂಚ್ಛಿಲಾಭಃ ಕ್ವಚಿದಪಿ ಸಗಣಸ್ತಂ ಮಹೇಕ್ಷಂ ದಿದೃಕ್ಷೇ ॥ ೧೯ ॥

ಈಶ್ವರದೇವ ಎಂಬ ರಾಜನು ಮಧ್ವಗುರುಗಳ ವಿಷಯದಲ್ಲಿ ಅಪರಾಧವೆಸಗಿದನು. ದಾರಿಯಲ್ಲಿ ಹೋಗುವ ಪ್ರತಿಯೊಬ್ಬರೂ ಇಲ್ಲಿ ನೀರಿನ ಆಸರೆಗಾಗಿ ಮಣ್ಣನ್ನು ಅಗೆದು ಮುಂದೆ ಹೋಗಬೇಕು ಎಂದು ಹೇಳಿದನು. ಮಧ್ವಗುರುಗಳು ನಾವು ಸಂನ್ಯಾಸಿಗಳು ನೀನು ಅಗೆದು ತೋರಿಸು ಎಂದು ಹೇಳಿದರು. ಅವನು ಅಗೆಯಲು ಹೊರಟಾಗ ಆ ಅಗೆಯುವಿಕೆಯು ನಿಲ್ಲಲೇ ಇಲ್ಲ. ಹೀಗೆ ಅವನ ಅಪರಾಧಕ್ಕೆ ತಕ್ಕಂತೆ ಶಿಕ್ಷೆಯನ್ನು ಮಧ್ವಗುರುಗಳು ನೀಡಿದರು. ಅದರಂತೆ ಮುಂದೆ ಶಿಷ್ಯರೊಡನೆ ಸಂಚರಿಸುವಾಗ ಗಂಗಾನದಿಯನ್ನು ದಾಟಲು ತೆಪ್ಪ ಮೊದಲಾದ ಸಾಧನೆ ಇಲ್ಲದೇ ಇದ್ದಾಗ ಅನಾಯಾಸವಾಗಿ ಶಿಷ್ಯರನ್ನು ಕರೆದುಕೊಂಡು ಗಂಗೆಯನ್ನು ದಾಟಿದರು. ತುರುಕರಾಜನ ಭಾಷೆಯಿಂದಲೇ ಮಾತನಾಡಿಸಿ ಅವನನ್ನು ತಮ್ಮ ಅಧೀನವನ್ನಾಗಿ ಮಾಡಿಕೊಂಡರು. ದಾರಿಯ ನಡುವೆ ತಮ್ಮನ್ನು ಕೊಲ್ಲಲು ಬಂದಿರುವ ಕಳ್ಳರು ಪರಸ್ಪರವಾಗಿ ಹೊಡೆದಾಡಿಕೊಳ್ಳುವಂತೆ ಮಾಡಿದರು. ಒಂದು ಕಡೆ ಕಳ್ಳರ ಸಮುದಾಯವನ್ನು ಉಪೇಂದ್ರತೀರ್ಥರೆಂಬ ಒಬ್ಬ ಶಿಷ್ಯರ ಮೂಲಕ ಓಡುವಂತೆ ಮಾಡಿದರು. ಯೋಗಸಾಮರ್ಥ್ಯವನ್ನು ಹೊಂದಿರುವ ಶ್ರೀಮದಾಚಾರ್ಯರು ಬಂಡೆಕಲ್ಲಿನಂತೆ ಆದರು. ಅಂತಹ ಪೂರ್ಣಪ್ರಜ್ಞರನ್ನು ನೋಡಲು ಬಯಸುತ್ತೇನೆ.

ದೈತ್ಯವ್ಯಾಘ್ರೋಪಘಾತೀ ನರಸಖಕರತೋ ಲಬ್ಧಗೌರೋಪಲಾರ್ಚೋ
ವ್ಯಾಸಾಜ್ಞಾಭೃತ್ ಸುತರ್ತಾ ಲಘು ಸುರಸರಿತೋ ವಾರಿಸಂಸ್ತಂಭಯೋಗಾತ್ ।
ಭಿತ್ವಾ ಭೂಮಿಂ ದ್ಯುನದ್ಯಾ ಮಠಮುಪಗತಯಾ ವಂದಿತೋ ಮೂರ್ತಿಮತ್ಯಾ
ಯೂನೋಽನೇಕಾನ್ ವಿಜಿಗ್ಯೇ ಯುಗಪದಪಿ ಗತಾನ್ ಯಃ
ಸಲೀಲಂ ತಮೀಢೇ ॥ ೨೦ ॥

ಪ್ರಯಾಣದಲ್ಲಿ ಹುಲಿಯ ರೂಪದಿಂದ ಬಂದ ದೈತ್ಯಶ್ರೇಷ್ಠನನ್ನು ಘಾತಿಸಿದರು. ನರನೆಂಬ ಮುನಿಯ ಮಿತ್ರನಾದ ನಾರಾಯಣದೇವರ ಕೈಯಿಂದ ಲಭಿಸಿದ ಬಿಳಿ ಬಣ್ಣದ ಕಲ್ಲಿನ ಪ್ರತಿಮೆ ಎನಿಸಿದ ವ್ಯಾಸಮುಷ್ಟಿಗಳನ್ನು ಹೊಂದಿದರು. ವೇದವ್ಯಾಸದೇವರನ್ನು ನಿರಂತರ ಹೃದಯದಲ್ಲಿ ಧರಿಸಿದರು. ದೇವಗಂಗಾನದಿಯನ್ನು ಶಿಲೆಯಂತೆ ಗಟ್ಟಿಯನ್ನಾಗಿ ಮಾಡಿ ಅದರ ಮೇಲೆ ಶಿಷ್ಯರನ್ನು ನಡೆಸಿಕೊಂಡು ಹೋದರು. ತಾವಿರುವ ಜಾಗದಲ್ಲಿಯೇ ಭೂಮಿಯನ್ನು ಸೀಳಿಕೊಂಡು ಮಠಕ್ಕೆ ಆಗಮಿಸಿದ ಗಂಗಾದೇವಿಯು ಮಧ್ವಗುರುಗಳಿಗೆ ದರ್ಶನವನ್ನು ಕೊಟ್ಟಳು. ಮಧ್ವಗುರುಗಳು ಏಕಕಾಲದಲ್ಲಿ ತಮ್ಮ ಬಳಿ ಸೆಣೆಸಲು ಬಂದ ಅನೇಕ ಯುವಕರನ್ನು ಅನಾಯಾಸವಾಗಿ ಜಯಿಸಿದರು. ಅಂತಹ ಮಹಾಮಹಿಮೆಯಿಂದ ಕೂಡಿದ ಮಧ್ವಗುರುಗಳನ್ನು ಸ್ಮರಿಸುತ್ತೇನೆ.

ಸ್ವರ್ಗಾಹ್ವೋಕ್ತಿಪ್ರಖಂಡೀ ಸಕಲಸಮಯಜಿತ್ ವ್ಯಾಖ್ಯಯಾಭಾತ್ ಪುರಾಽಜೌ
ಶಿಷ್ಯಾಣಾಮಾಯುಧಾನಿ ಪ್ರಕಟಯತಿ ಪುರಾ ಪೂಜಿತಃ ಶೂಲಿನಾಽಭೂತ್ ।
ಪ್ರತ್ಯಕ್ಷೇಣ ಕ್ವಚಿದ್ಯೋ ದಶಶತಗುರುರಂಭಾಪಯೋಭುಕ್ ಕ್ಷಣಾದ್ ಸದ್
ಗಾನಾತ್ ಪುಷ್ಪಾದಿಕಾರೀತ್ಯಭಿಹಿತಚರಿತೋ ಯಃ ಶುಭೈಸ್ತಂ ಪ್ರಪದ್ಯೇ ॥ ೨೧ ॥

ಮಧ್ವಾಚಾರ್ಯರು ಅಮರೇಂದ್ರಪುರಿ ಎಂಬ ವಾದಿಯ ಜೊತೆಗೆ ಕಾಶೀಪಟ್ಟಣ ದಲ್ಲಿ ವಾದವನ್ನು ಮಾಡಿ ಅವನನ್ನು ಖಂಡಿಸಿದರು. ಎಲ್ಲ ಸಿದ್ಧಾಂತಿಗಳನ್ನು ಜಯಿಸಿದರು. ವೇದವ್ಯಾಖ್ಯಾನದಿಂದ ಶ್ರೇಷ್ಠ ಆಚಾರ್ಯ ಪುರುಷರಾಗಿ ಶೋಭಿಸಿದರು. ಹಿಂದೆ ಭೀಮಾವತಾರ ಕಾಲದಲ್ಲಿ ಯುದ್ಧ ಮಾಡಿದಾಗ ಕುರುಕ್ಷೇತ್ರದಲ್ಲಿ ಮಣ್ಣಿನಲ್ಲಿ ಹುದುಗಿದ್ದ ತಮ್ಮ ಗದೆ ಮುಂತಾದ ಆಯುಧಗಳನ್ನು ಶಿಷ್ಯರಿಗೆ ತೋರಿಸಿದರು. ಅದೇ ಕ್ಷೇತ್ರದಲ್ಲಿ ರುದ್ರದೇವರು ಬ್ರಾಹ್ಮಣನ ವೇಷದಲ್ಲಿ ಪ್ರಕಟವಾದಾಗ ಅವರಿಂದ ಪೂಜಿಸಲ್ಪಟ್ಟರು. ಮತ್ತೊಂದು ಸ್ಥಳದಲ್ಲಿ ಒಂದು ಸಾವಿರ ರಾಜಕೇಲಿ ಎಂಬ ಬಾಳೆಹಣ್ಣುಗಳನ್ನು ತಿಂದು ಹಾಲನ್ನು ಕುಡಿದರು. ಸ್ವಲ್ಪ ಸಮಯದಲ್ಲಿಯೇ ಉತ್ತಮವಾದ ಸಂಗೀತಗಾನದಿಂದ ಗಿಡ, ಮರಗಳು ಹೂವು ಹಣ್ಣುಗಳನ್ನು ಬಿಡುವಂತೆ ಮಾಡಿದರು. ಈ ರೀತಿಯಾಗಿ ಸಜ್ಜನರಿಂದ ಹೊಗಳಲ್ಪಟ್ಟ ಚರಿತ್ರೆಯುಳ್ಳ ಮಧ್ವಾಚಾರ್ಯರನ್ನು ನಾನು ಶರಣು ಹೊಂದುತ್ತೇನೆ.

ವ್ಯಾಖ್ಯಾಂ ಶ್ರುತ್ವಾ ಮುನಿಭ್ಯೋಽಭ್ಯದಿತ ಸಮಯತೋ ಯಸ್ಯ ಲಭ್ಯಂ ಫಣೀಂದ್ರೋ
ವೈಕುಂಠಂ ಹೇಮನಾಮಾಮಣಿಮಯಸದನಂ ಶ್ರೀಶಧಾಮಾಸ್ತದೋಷಮ್ ।
ಸಾಯುಜ್ಯಾದ್ಯಾಪ್ತಸೌಖ್ಯೈರಖಿಲ ವಿಷಯಿಭಿಃ ಸುಂದರೀಭೋಗಭಾಗ್ಭಿಃ
ಬ್ರಹ್ಮಾದ್ಯೈರ್ನಾಥದೃಗ್ಭಿರ್ವಿಲಸಿತಮತುಲಂ ಸೋಽನುಗೃಹ್ಣಾತು ನೋಽಲಮ್ ॥ ೨೨ ॥

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಒಂದು ದಿನ ಬ್ರಹ್ಮಸೂತ್ರ ಭಾಷ್ಯ ಗ್ರಂಥವನ್ನು ಪ್ರವಚನ ಮಾಡುತ್ತಿದ್ದಾಗ ಸನಕಾದಿ ದೇವತೆಗಳ ಸಹಿತರಾಗಿ ಶೇಷದೇವರು ತಮ್ಮ ಲೋಕದಿಂದ ಬಂದು ಮಧ್ವಾಚಾರ್ಯರ ಪ್ರವಚನವನ್ನು ಕೇಳಿದರು. ಬಳಿಕ ತಮ್ಮ ಲೋಕಕ್ಕೆ ತೆರಳಿ ಉತ್ತಮವಾದ ಆಸನದಲ್ಲಿ ಕುಳಿತಿದ್ದ ಶೇಷದೇವರು, ಸನಕಾದಿಗಳನ್ನು ನಮಿಸಿ ಆಚಾರ್ಯರ ಶಾಸ್ತ್ರವನ್ನು ಅಧ್ಯಯನ ಮಾಡುವವರಿಗೆ ಏನು ಫಲ ಉಂಟಾಗುತ್ತದೆ ಎಂದು ಕೇಳಿದಾಗ ಮುಖ್ಯಫಲವು ವೈಕುಂಠವು. ವೈಕುಂಠದ ಮಹಿಮೆ ಏನೆಂದರೆ ಬಂಗಾರ ಮತ್ತು ನಾನಾ ವಿಧವಾದ ನವರತ್ನ ಖಚಿತವಾದ ಭವನವಿದೆ. ಅಲ್ಲಿ ಸಮಸ್ತ ದೋಷರಹಿತನಾದ, ಸಮಸ್ತ ಗುಣಪರಿಪೂರ್ಣನಾದ ಲಕ್ಷ್ಮೀಪತಿಯಾದ ನಾರಾಯಣನು ಸನ್ನಿಹಿತನಾಗಿರುತ್ತಾನೆ. ಅಲ್ಲಿರುವ ಚೇತನರಿಗೆ ಮುಪ್ಪು–ಮರಣ ಮುಂತಾದ ದೋಷಗಳು ಇಲ್ಲ. ಮುಕ್ತ ಚೇತನರು ಸಾಯುಜ್ಯ, ಸಾರೂಪ್ಯ, ಸಾಮೀಪ್ಯ, ಸಾಲೋಕ್ಯ ಎಂಬ ತಾರತಮ್ಯದಿಂದ ಕೂಡಿರುತ್ತಾರೆ. ಮೋಕ್ಷವನ್ನು ಪಡೆದ ಈ ಸಜ್ಜನರು ನಿರಂತರ ಆನಂದದಿಂದ ತುಂಬಿರುತ್ತಾರೆ. ಆ ಮುಕ್ತಿಯಲ್ಲಿ ಮುಕ್ತರ ಸ್ವರೂಪಪತ್ನಿಯರಾದ ಸುಂದರಿಯರು ಆನಂದ ಪಡಿಸುತ್ತಾರೆ ಮತ್ತು ತಾವು ಅವರೊಂದಿಗೆ ಆನಂದವನ್ನು ಹೊಂದುತ್ತಾರೆ. ಇವೆಲ್ಲವೂ ಸ್ವರೂಪ ಆನಂದದ ಅಭಿವ್ಯಕ್ತಿ ಎನಿಸಿದೆ. ಅಲ್ಲಿರುವ ಮುಕ್ತರು ಯಾವಾಗಲೂ ಶ್ರೀಹರಿಯನ್ನು ನೋಡುತ್ತಿರುತ್ತಾರೆ. ಬ್ರಹ್ಮ–ಶೇಷ–ಗರುಡ ಮುಂತಾದ ಮುಕ್ತರು ನಾನಾ ವಿಲಾಸಗಳಿಂದ ಶೋಭಿತರಾಗಿ ಅಲ್ಲಿ ಸಂಚರಿಸುತ್ತಾರೆ ಎಂದು ಶೇಷದೇವರು ವೈಕುಂಠವನ್ನು ವರ್ಣಿಸಿದರು. ಇಂತಹ ಶ್ರೇಷ್ಠವಾದ ವೈಕುಂಠವನ್ನು ದಯಪಾಲಿಸುವ ಶಾಸ್ತ್ರವನ್ನು ರಚಿಸಿರುವ ಶ್ರೀಮದಾಚಾರ್ಯರು ನಮ್ಮನ್ನು ಅನುಗ್ರಹಿಸಲಿ.

ನಾನಾದುರ್ನೀತಿವಾದೈರ್ವಿಹಿತಮುರುಮದಂ ಮಾಯಿಭೂತಾಸುರೇಂದ್ರೈಃ
ಯೋಽಯಂ ವೇದಾಂತಿಸಿಂಹೋ ವ್ಯಜಯತ ಕುರವಂ ಪುಂಡರೀಕಂ ಚ ಕಾಂಡಮ್ ।
ವಿಶ್ವಾಶ್ಚರ್ಯಪ್ರಕಾರಂ ಪ್ರವಚನಮಕರೋತ್ ಛಂದಸಾಂಯತ್ ಸ್ಪೃಧಾನ್ಯಃ
ತತ್ಕುರ್ವನ್ ಹಾಸ್ಯ ಆಸೀತ್ ದ್ವಿಜವರನಿಕರೇ ಸ್ಯಾಮ ತದ್ದಾಸದಾಸಾಃ ॥ ೨೩ ॥

ಮಧ್ವಾಚಾರ್ಯರ ಪ್ರೌಢಮಟ್ಟದ ಪಾಂಡಿತ್ಯವನ್ನು, ಅವರ ಕೀರ್ತಿಯನ್ನು ಸಹಿಸಲಾಗದ ಮಾಯಾವಾದಿಗಳು ಏಕಾಂತ ಪ್ರದೇಶದಲ್ಲಿ ಕುಳಿತು ದುರ್ಮಂತ್ರಗಳನ್ನು ಮಾಡಿದರು. ಮಧ್ವಾಚಾರ್ಯರನ್ನು ಸಿದ್ಧಾಂತದಲ್ಲಿ ಸೋಲಿಸಲರಿಯದ ಅವರು ಹೇಗಾದರೂ ಅವರನ್ನು ಜಯಿಸಬೇಕೆಂದು ನಿರ್ಧರಿಸಿ ಪುಂಡರೀಕಪುರಿ ಎಂಬ ಅದ್ವೈತ ಪಂಡಿತನನ್ನು ಮಧ್ವಾಚಾರ್ಯರನ್ನು ಜಯಿಸಿ ಎಂದು ಹುರಿದುಂಬಿಸಿದರು. ಆ ಪುಂಡರೀಕಪುರಿಯಾದರೂ ಕೆಟ್ಟ ಶಬ್ದಗಳಿಂದ ದುರಹಂಕಾರದಿಂದ ಕಿರುಚಿ ಕೊಳ್ಳುತ್ತಿದ್ದನು. ಇದನ್ನು ಕಂಡರೆ ಸಿಂಹದ ಬಳಿ ನರಿಯು ಕಿರುಚುವಂತೆ ತೋರುತ್ತಿತ್ತು .

ಶ್ರೀಮದಾಚಾರ್ಯರು ವೇದಗಳಿಗೆ ಸಮ್ಮತವಾಗುವಂತೆ ಜಗತ್ತೇ ಬೆರಗಾಗುವ ಪ್ರವಚನವನ್ನು, ವ್ಯಾಖ್ಯಾನವನ್ನು ಮಾಡಿದರು. ಆಚಾರ್ಯರ ಜೊತೆಗೆ ಸ್ಪರ್ಧೆಗೆ ಆಗಮಿಸಿದ ಪುಂಡರೀಕಪುರಿ ಎಂಬ ವಾದಿಯು ಬ್ರಾಹ್ಮಣಶ್ರೇಷ್ಠರ ಸಮುದಾಯದಲ್ಲಿ ವೇದಗಳಿಗೆ ವ್ಯಾಖ್ಯಾನ ಮಾಡಲು ಹೋಗಿ ಅಪಹಾಸಕ್ಕೆ ತುತ್ತಾದನು. ಇಂತಹ ಶ್ರೀಮದಾಚಾರ್ಯರ ಸೇವಕರ ಸೇವಕರಾಗಿ ನಾವು ಬದುಕುವಂತೆ ಆಗಲಿ.

ಪದ್ಮಾಖ್ಯಂ ಸಿಂಧುರಾಜಂ ಪ್ರಿಯಜನಪರಮಾಗಸ್ಕೃತಂ ಪ್ರಾಪ್ಯಭೀತೇಃ
ಅನ್ಯಾನ್ಸ್ಕುರ್ವಾಣಮಗ್ರೇ ಸಪದಿ ನಿಜಗೃಹೇ ಗೋಗಣೈರ್ಮಧ್ವಪಾರ್ಥಃ ।
ಯೋ ಯದ್ಧಾಸೋಕ್ತಿಬಾಣೈರ್ವಿದಲಿತಹೃದಯಾ ದುದ್ರುವುರ್ಮಾಯಿದೈತ್ಯಾಃ
ವಿಶ್ವಜ್ಞಾಹ್ವೋ ಹರಿರ್ಯೋ ಜಗತಿ ವಿಜಯತೇ ಸ ಪ್ರದದ್ಯಾಜ್ಜಯಂ ನಃ ॥ ೨೪ ॥

ಶ್ರೀಮದಾಚಾರ್ಯರು ತಾವು ರಚಿಸಿದ ಬ್ರಹ್ಮಸೂತ್ರಭಾಷ್ಯ ಮೊದಲಾದ ಗ್ರಂಥಗಳನ್ನು ಶಂಕರ ಪಂಡಿತರೆಂಬುವರ ಮನೆಯಲ್ಲಿ ಇಟ್ಟಿದ್ದರು. ಪದ್ಮತೀರ್ಥನೆಂಬ ಮಾಯಾವಾದಿಯು ಈ ಸಮಾಚಾರವನ್ನು ತಿಳಿದು ಮಧ್ಯರಾತ್ರಿಯಲ್ಲಿ ಶಂಕರ ಪಂಡಿತರ ಮನೆಗೆ ನುಗ್ಗಿ ಬಲಾತ್ಕಾರದಿಂದ ಆ ಗ್ರಂಥಗಳನ್ನು ಅಪಹರಿಸಿದನು. ಮಧ್ವಾಚಾರ್ಯರು ಈ ಸಮಾಚಾರವನ್ನು ತಿಳಿದ ಕೂಡಲೇ ಶಿಷ್ಯ ಸಹಿತರಾಗಿ ಅಲ್ಲಿಗೆ ಬಂದರು. ಪದ್ಮತೀರ್ಥನು ತಾನು ಹೆದರಿ ಬೇರೆಯವರ ಜೊತೆಗೆ ಬಂದು ತಾನು ಹಿಂದೆ ನಿಂತಿದ್ದನು. ಪದ್ಮತೀರ್ಥ ಮತ್ತು ಅವನ ಅನುಯಾಯಿಗಳನ್ನು ಶ್ರೀಮದಾಚಾರ್ಯರು ಕ್ಷಣದಲ್ಲಿ ಜಯಿಸಿದರು. ಹಿಂದೆ ವನವಾಸದಲ್ಲಿ ಒಂದು ಬಾರಿ ಪಾಂಡವರು ಇಲ್ಲದಿರುವಾಗ ಸೈಂಧವನಾದ ಜಯದ್ರಥನು ಪಾಂಡವರ ಆಶ್ರಮಕ್ಕೆ ಬಂದು ಒಬ್ಬಂಟಿಗಳಾದ ದ್ರೌಪದಿಯನ್ನು ರಥದಲ್ಲಿ ಕೂರಿಸಿ ಅಪಹರಿಸಿದಾಗ ಅರ್ಜುನನು ಸೈಂಧವನನ್ನು ಬೆನ್ನಟ್ಟಿ ಬಾಣಗಳಿಂದ ಹೊಡೆದು ಸೋಲಿಸಿದಂತೆ ಶ್ರೀಮದಾಚಾರ್ಯರೆಂಬ ಅರ್ಜುನನು ದ್ರೌಪದಿಯಂತಹ ವೇದಾಭಿಮಾನಿನಿಗೆ ಸೈಂಧವನೆಂಬ ಪದ್ಮತೀರ್ಥನು ಅನ್ಯಾಯ ಮಾಡಲು ಬಂದಾಗ ಪರಾಜಯಗೊಳಿಸಿದರು. ಪದ್ಮತೀರ್ಥ ಮತ್ತು ಅವನ ಅನುಯಾಯಿಗಳು ಓಡಿರಿ ಓಡಿರಿ ಎಂಬ ಮಾತುಗಳನ್ನು ಹೇಳಿಕೊಂಡು ಆಚಾರ್ಯರ ವಾಗ್ಬಾಣಗಳಿಂದ ಧೃತಿಗೆಟ್ಟು ಓಡಿಹೋದರು. ನರಸಿಂಹದೇವರು ಉಗುರುಗಳಿಂದ ಹಿರಣ್ಯಕಶಿಪುವಿನ ಹೊಟ್ಟೆಯನ್ನು ಬಗೆದಂತೆ ಯುಕ್ತಿಗಳೆಂಬ ಉಗುರುಗಳಿಂದ ಶತ್ರುಗಳೆಂಬ ಮರ್ಮವನ್ನು ಭೇದಿಸಿದ ಶ್ರೀಮದಾಚಾರ್ಯರೆಂಬ ನರಸಿಂಹನು ಜಯಶೀಲನಾಗಿದ್ದಾನೆ. ಇಂತಹ ಮಧ್ವನರಸಿಂಹನು ನಮಗೆ ಉತ್ಕರ್ಷವನ್ನು ಕರುಣಿಸಲಿ.

ಶ್ರೀಕಾಂತಾಂಘ್ರಿಪ್ರಸಂಗಾದಧಿಕಶುಚಿತಮೋ ಯಾನ್ ಯಥಾ ಗಾಂಗ ಓಘೋ
ರಾಜ್ಞಾ ಸಂವಂದಿತಾಂಘ್ರಿಃ ಸಕಲಗುಣಗಣೋಪೇತಪಾದಾದಿಕಾಂತಃ ।

ಸರ್ವೇಷಾಂ ದರ್ಶನೀಯೋ ಲಿಕುಚಕುಲಭವೋ ವೇದಶಾಸ್ತ್ರಾದಿವೇದೀ
ಪ್ರಾಪಾಯುಗ್ವಿಕ್ರಮಾರ್ಯೋ ಯಮಖಿಲಗುರುಮಾನಂದತೀರ್ಥಂ ಪ್ರವಂದೇ ॥ ೨೫ ॥

ಮಧ್ವಾಚಾರ್ಯರು ಲಕ್ಷ್ಮೀಪತಿಯಾದ ಭಗವಂತನ ಪಾದಕಮಲಗಳ ಜೊತೆ ನಿರಂತರ ಸಂಬಂಧವನ್ನು ಹೊಂದಿದ್ದಾರೆ. ಪರಮಾತ್ಮನ ಜೊತೆಗೆ ಮಾತನಾಡುವುದೇ ಮೊದಲಾದ ಅತಿಶಯವನ್ನು ಹೊಂದಿರುತ್ತಾರೆ. ಮಧ್ವಾಚಾರ್ಯರು ಗಂಗಾ ಪ್ರವಾಹದಂತೆ ಇದ್ದಾರೆ. ಪಶ್ಚಿಮ ದಿಕ್ಕಿನ ಕಡೆ ಪ್ರಯಾಣವನ್ನು ಬೆಳೆಸುವಾಗ ಜಯಸಿಂಹರಾಜನು ಇವರ ಪಾದಗಳನ್ನು ನಮಸ್ಕರಿಸಿದನು. ಮಹಾಪುರುಷರ ಮೂವತ್ತೆರಡು ಲಕ್ಷಣಗಳನ್ನು ಹೊಂದಿದ ಶ್ರೀಮದಾಚಾರ್ಯರು, ಪಾದದಿಂದ ಶಿರಃಪರ್ಯಂತ ಸುಂದರವಾದ ಅವಯವಗಳುಳ್ಳವರು. ಎಲ್ಲರಿಗೂ ಪರಮಸುಂದರ ಪುರುಷರಾಗಿ ಕಾಣಿಸುತ್ತಾರೆ. ಮನುಷ್ಯೋತ್ತಮರು ಮತ್ತು ದೇವಶ್ರೇಷ್ಠರು ಇವರುಗಳಿಗೆ ಗುರುಗಳಾದವರು ಶ್ರೀಮದಾಚಾರ್ಯರು. ಇವರನ್ನು ಲಿಕುಚವಂಶದಲ್ಲಿ ಹುಟ್ಟಿದ ತ್ರಿವಿಕ್ರಮಪಂಡಿತಾಚಾರ್ಯರು ಹೊಂದಿದರು. ಅಂತಹ ಆನಂದತೀರ್ಥ ಭಗವತ್ಪಾದಾಚಾರ್ಯರನ್ನು ಪೂಜಿಸುತ್ತೇನೆ.

ಲಬ್ಧಗ್ರಂಥಃಸ್ತುತೋಽಲಂ ಲಿಕುಚಕವಿವರೇಣೇಹ ನಿನ್ಯೇ ದಿನಾನಿ
ಶ್ರೀಭರ್ತುಃ ಪ್ರೀತಿವೃದ್ಧ್ಯೈ ವಿವಿಧಶುಭಕೃತೀಃ ಕೇವಲಂ ಯಸ್ತು ಕುರ್ವನ್ ।
ನಿರ್ಲೇಪೋ ದಗ್ಧಕರ್ಮಾ ಮತಿಕೃತಿಕರಣೈಃ ಲೋಕಶಿಕ್ಷಾಂ ಚ ಕರ್ತುಂ
ದೈವೈರ್ವ್ಯಷ್ಟಾಮೃತಾರ್ಚಃ ಪ್ರವಚನಚತುರೋ ಮೇ ಪ್ರವಕ್ತೃತ್ವದಃ ಸ್ಯಾತ್ ॥ ೨೬ ॥

ಶ್ರೀಮದಾಚಾರ್ಯರು ತಮ್ಮ ಗ್ರಂಥಗಳನ್ನು ಶಂಕರಪಂಡಿತರಲ್ಲಿ ಇಟ್ಟಿದ್ದರು. ಪದ್ಮತೀರ್ಥರೆಂಬ ಸಂನ್ಯಾಸಿ ಆ ಗ್ರಂಥ ಸಮುದಾಯವನ್ನು ಅಪಹರಿಸಿದನು. ಪುನಃ ಈ ಅಪರಾಧವನ್ನು ಮಾಡಿದ ಸಂನ್ಯಾಸಿಗೆ ರಾಜನಿಂದ ದಂಡನೆಯಾಗದ ಹೊರತು ಗ್ರಂಥವನ್ನು ಸ್ವೀಕರಿಸುವುದಿಲ್ಲ ಎಂದು ಆಚಾರ್ಯರು ನಿರ್ಧರಿಸಿ ಜಯಸಿಂಹರಾಜನು ಪದ್ಮತೀರ್ಥಾದಿಗಳನ್ನು ದಂಡಿಸಿದ ಬಳಿಕ ಗ್ರಂಥವನ್ನು ಸ್ವೀಕರಿಸಿದರು. ಶಂಕರಪಂಡಿತರ ಮನೆಯಲ್ಲಿದ್ದ ಗ್ರಂಥಗಳನ್ನು ಏಕಾಂತದಲ್ಲಿ ತ್ರಿವಿಕ್ರಮ ಪಂಡಿತರು ಅಧ್ಯಯನ ಮಾಡಿ ಆಚಾರ್ಯರ ಬಗ್ಗೆ ಅತಿಶಯ ಭಕ್ತಿಯನ್ನು ಹೊಂದಿದರು. ಶ್ರೀಮದಾಚಾರ್ಯರನ್ನು ಸ್ತುತಿಸಿದರು. ಮುಂದೆ ಬರುವ ಪಾಪಗಳ ಸಮುದಾಯದಿಂದ ದೂರರಾದ, ಸಂಚಿತ ಕರ್ಮಗಳೆಲ್ಲವನ್ನೂ ಸುಟ್ಟುಕೊಂಡಿರುವ ಕೇವಲ ಲಕ್ಷ್ಮೀಪತಿಯಾದ ಶ್ರೀಹರಿಯ ಪ್ರೀತಿಗೋಸ್ಕರ ಮನನಾದಿ ಸತ್ಕರ್ಮದಲ್ಲಿ ನಿಷ್ಠರಾದ, ತಮ್ಮ ಸದ್ಧರ್ಮ ಆಚರಣೆ, ಗ್ರಂಥಗಳ ರಚನೆ, ಸಜ್ಜನರಿಗೆ ಉಪದೇಶವನ್ನು ಮಾಡಲು ಆಸಕ್ತರಾದ ಶ್ರೀಮದಾಚಾರ್ಯರು ಅನೇಕ ವಿಧವಾದ ಮಂಗಳ ಕರ್ಮಗಳನ್ನು ಮಾಡುತ್ತಾ ವಿಷ್ಣುಮಂಗಳ ದೇವಾಲಯದಲ್ಲಿ ಅನೇಕ ದಿನಗಳನ್ನು

ಕಳೆದರು. ಶ್ರೀಮದಾಚಾರ್ಯರು ಪೂಜೆ ಮಾಡುವಾಗ ಇವರ ನಿರ್ಮಾಲ್ಯದಲ್ಲಿ ದೇವತೆಗಳು ಅಮೃತವೇ ಸುರಿಯುವಂತೆ ಮಾಡಿದ್ದರು. ವೇದಾಂತ ವ್ಯಾಖ್ಯಾನದಲ್ಲಿ ಆಸಕ್ತರಾದ ಇಂತಹ ಶ್ರೀಮದಾಚಾರ್ಯರು ನನಗೂ ಒಳ್ಳೆಯ ಪ್ರವಚನ ಮಾಡುವ ಸಾಮರ್ಥ್ಯವನ್ನು ನೀಡಲಿ.

ಸ್ನಾತೋ ದೇವಾಭಿಷೇಕ್ತಾಸದರಿದರಧರಸ್ತಂತ್ರಶಾಸ್ತ್ರಾನುವೃತ್ತ್ಯಾ
ಸಮ್ಯಕ್ ಸಂಪೂಜ್ಯ ವಿಷ್ಣುಂ ವರತುಲಸಿಕಯಾ ದರ್ಶನೀಯೋಽಥ ಭುಕ್ತ್ವಾ ।
ನಾನಾಲೋಕಾಭಿನಂದೀ ಗುರುರಥವಿಲಸದ್ವ್ಯಾಖ್ಯಯಾ ಸಾಂಧ್ಯಕೃತ್ಯಂ
ಕೃತ್ವಾ ಗೋವಿಂದಲೀಲಾಕಥಕ ಉರು ಕಥಾಂ ವೈಷ್ಣವೀಂ ವಾಚಯೇನ್ನಃ ॥ ೨೭ ॥

ಶ್ರೀಮದಾಚಾರ್ಯರು ಪ್ರಾತಃಕಾಲದಲ್ಲಿ ಪಾಠವನ್ನು ಮುಗಿಸಿ, ಮಧ್ಯಾಹ್ನ ಕಾಲದಲ್ಲಿ ಸ್ನಾನ ಮಾಡಿ ದೇವರಿಗೆ ಅಭಿಷೇಕಾದಿಗಳನ್ನು ನೆರವೇರಿಸಿದರು. ನಿರ್ದುಷ್ಟವಾದ ಶಂಖ–ಚಕ್ರಗಳನ್ನು ಧರಿಸಿ ಪಂಚರಾತ್ರವೆಂಬ ತಂತ್ರಶಾಸ್ತ್ರವನ್ನು ಅನುಸರಿಸುವ ದೇವತಾರಾಧನೆಯನ್ನು ಉತ್ತಮವಾದ ಶ್ರೀತುಳಸಿಯಿಂದ ಚೆನ್ನಾಗಿ ಮಾಡಿದರು. ಹರಿಪ್ರಸಾದರೂಪವಾದ ತುಳಸೀ, ಗಂಧಾದಿಗಳನ್ನು ಲೇಪಿಸಿಕೊಂಡು ಈಗಲೂ ದರ್ಶನೀಯರಾದ ಶ್ರೀಮದಾಚಾರ್ಯರು ಪೂಜೆಯ ನಂತರದಲ್ಲಿ ಹರಿಪ್ರಸಾದರೂಪವಾದ ನೈವೇದ್ಯ ಪ್ರಸಾದವನ್ನು ಸ್ವೀಕರಿಸಿದರು. ಎಲ್ಲರ ಅಜ್ಞಾನವನ್ನು ಪರಿಹರಿಸುವ ಪ್ರವಚನದಿಂದ ಅನೇಕ ಸಜ್ಜನರನ್ನು ಸಂತೋಷಪಡಿಸಿದರು. ಪ್ರವಚನ ಮುಗಿದ ಬಳಿಕ ಸಾಯಂಕಾಲದಲ್ಲಿ ಮಾಡಬೇಕಾದ ಸ್ನಾನ, ಆಹ್ನಿಕಾದಿಗಳನ್ನು ಆಚರಿಸಿದರು. ಬಳಿಕ ಭಾಗವತದಲ್ಲಿ ಹೇಳಿದ ಶ್ರೀಕೃಷ್ಣನ ಚರಿತ್ರೆಗಳನ್ನು ಸದ್ಭಕ್ತರಿಗೆ ಬೋಧಿಸಿದರು. ಈ ರೀತಿಯಾಗಿ ವಿಷ್ಣುವಿನ ಸರ್ವೋತ್ತಮತ್ವಾದಿ ಮಹಿಮೆಗಳನ್ನು ಪ್ರತಿಪಾದಿಸುವ ಶ್ರೀಮದಾಚಾರ್ಯರು ಕೃಷ್ಣನ ಶ್ರೇಷ್ಠವಾದ ಕಥೆಯನ್ನು ನಾವೂ ಪ್ರವಚನ ಮಾಡುವಂತೆ ಮಾಡಲಿ.

ಮಾನ್ಯೋಪನ್ಯಾಸಧನ್ಯೋ ಹರಿರಖಿಲಗುಣೋ ಬ್ರಹ್ಮವೇದೈಕವೇದ್ಯಃ
ಕರ್ತಾ ವಿಶ್ವಸ್ಯ ಮೋಕ್ಷಂ ಶುಭಸುಖವಿಷಯಂ ರಾತಿ ಭಕ್ತೇಭ್ಯ ಇತ್ಥಮ್ ।
ಸತ್ತರ್ಕೈಃ ಸಾಧಯಿತ್ವಾ ಶ್ರುತಿಶತಸಹಿತೈಃ ಸೂರಿಸೂನುಂ ವಿಜಿತ್ಯ ।
ವ್ಯಾಖ್ಯಾತಾ ತಸ್ಯ ಪೂರ್ಣಪ್ರಮತಿರನುದಿನಂ ವ್ಯಾಖ್ಯಯಾಪ್ಯಾಯಯೇನ್ಮಾಮ್॥ ೨೮ ॥

ಪೂಜ್ಯವಾದ ತತ್ವವಿಷಯಕ ಪ್ರವಚನಗಳಿಂದ ಧನ್ಯರೆನಿಸಿದ ಪೂರ್ಣಪ್ರಜ್ಞರು ಶ್ರೀನಾರಾಯಣನು ಅಸಂಖ್ಯವಾದ, ಮಂಗಳಕರವಾದ ಜ್ಞಾನ–ಆನಂದಾದಿ ಧರ್ಮಗಳಿಂದ ಕೂಡಿದವನು. ಬ್ರಹ್ಮ ಎಂಬ ಶಬ್ದದಿಂದ ವಾಚ್ಯನಾದವನು. ವೇದಗಳಿಂದ, ಸದಾಗಮಗಳಿಂದ ಮಾತ್ರವೇ ತಿಳಿಯಲು ಯೋಗ್ಯನಾದವನು.

ಸಮಸ್ತ ಪ್ರಪಂಚಕ್ಕೂ ನಿಮಿತ್ತ ಕಾರಣನಾದವನು. ಯಾವ ಭಕ್ತನು ವೈರಾಗ್ಯದಿಂದ ಕೂಡಿ ಭಕ್ತಿಯಿಂದ ಶ್ರವಣ-ಮನನ-ನಿಧಿಧ್ಯಾಸನವನ್ನು ಮಾಡಿ ಅಪರೋಕ್ಷ ಜ್ಞಾನವನ್ನು ಸಂಪಾದಿಸಿಕೊಳ್ಳುತ್ತಾನೋ ಅಂತಹ ಭಗವತ್ಪ್ರಸಾದವನ್ನು ಪಡೆದ ಅಧಿಕಾರಿಗಳಿಗೆ ಮಂಗಳಕರವಾದ, ಅಪ್ರಾಕೃತ ದಿವ್ಯಭೋಗಗಳುಳ್ಳ, ಸ್ವರೂಪ ಆನಂದ ಆವಿರ್ಭಾವವುಳ್ಳ ಮೋಕ್ಷವನ್ನು ಕೊಡುತ್ತಾನೆ. ಈ ರೀತಿಯಾಗಿ ನೂರಾರು ವೇದವಾಕ್ಯಗಳ ಆಧಾರದಿಂದ ಯೋಗ್ಯವಾದ ಯುಕ್ತಿಯಿಂದ ಸತ್‌ಸಿದ್ಧಾಂತವನ್ನು ಸಾಧಿಸಿ ಸುಬ್ರಹ್ಮಣ್ಯ ಪಂಡಿತರ ಮಗನಾದ ತ್ರಿವಿಕ್ರಮ ಪಂಡಿತರನ್ನು ವಾದದಲ್ಲಿ ಜಯಿಸಿದರು. ತ್ರಿವಿಕ್ರಮ ಪಂಡಿತಾಚಾರ್ಯರಿಗೆ ಪ್ರತಿದಿನವೂ ಪ್ರವಚನವನ್ನು ಮಾಡಿ ಸಂತೋಷ ಪಡಿಸಿದರು. ಇಂತಹ ಪೂರ್ಣಪ್ರಜ್ಞರು ಪ್ರವಚನದಿಂದ ನನ್ನನ್ನೂ ಸಂತೋಷಪಡಿಸಲಿ, ಆನಂದವನ್ನುಂಟು ಮಾಡಲಿ.

ಸಾಮ್ನಸ್ತ್ರೈವಿಕ್ರಮಾರ್ಯಾದ್ ವ್ಯರಚಯದನುಭಾಷ್ಯಂ ಶತಗ್ರಂಥಕರ್ತಾ
ಸೋದರ್ಯಂ ಸ್ವಂ ವಿರಕ್ತಂ ಯತಿಮಕೃತ ಮಹಾಸದ್ಗುಣಂ ವಿಷ್ಣುತೀರ್ಥಮ್ ।
ವಾದೀಂದ್ರಂ ಪದ್ಮನಾಭಂ ಪ್ರಿಯಮಥ ಚ ಪರಾನ್ ಸದ್ಗುಣಾನ್ ಶ್ಲಾಘ್ಯಶಿಷ್ಯಾನ್
ಯೋಽನೇಕಾನ್ ಸದ್ಗೃಹಸ್ಥಾನಪಿ ಸ ವಿಜಯತೇ ಕಣ್ವತೀರ್ಥಾಂತಿಕಸ್ಥಃ ॥ ೨೯ ॥

ಶತಗ್ರಂಥಕರ್ತೃ ಎಂದು ಪ್ರಸಿದ್ಧರಾದ ಶ್ರೀಮದಾಚಾರ್ಯರು ತ್ರಿವಿಕ್ರಮ ಪಂಡಿತಾಚಾರ್ಯರಿಗೆ ಸಂಬಂಧಿಸಿದಂತೆ ಅವರು ಪ್ರಾರ್ಥಿಸಿದಂತೆ ಅನುವ್ಯಾಖ್ಯಾನ ಗ್ರಂಥವನ್ನು ರಚಿಸಿದರು. ವಿರಕ್ತನಾದ, ಉತ್ಕೃಷ್ಟವಾದ ವೈರಾಗ್ಯವನ್ನು ಹೊಂದಿರುವ, ನಿರ್ದುಷ್ಟನಾದ, ಜ್ಞಾನ ಭಕ್ತ್ಯಾದಿ ಸದ್ಗುಣಗಳುಳ್ಳ, ತಮ್ಮ ಪೂರ್ವಾಶ್ರಮ ಸಹೋದರನಾದ ವಿಷ್ಣುತೀರ್ಥರೆಂಬ ಹೆಸರುಳ್ಳ ಯೋಗ್ಯರನ್ನು ಸಂನ್ಯಾಸಿಯನ್ನಾಗಿ ಮಾಡಿದರು. ವಾದಿಶ್ರೇಷ್ಠರಾದ ತಮಗೆ ಅತ್ಯಂತ ಪ್ರೀತಿ ವಿಷಯರಾದ ಶೋಭನಭಟ್ಟರನ್ನು ಪದ್ಮನಾಭತೀರ್ಥ ಎಂಬ ಹೆಸರಿನಿಂದ ಸಂನ್ಯಾಸಿಯನ್ನಾಗಿ ಮಾಡಿದರು. ಪದ್ಮನಾಭತೀರ್ಥರ ಅನಂತರದಲ್ಲಿ ಅನೇಕ ಪ್ರಶಂಸೆಗೆ ಯೋಗ್ಯರಾದ ಶಿಷ್ಯರನ್ನು ಸಂನ್ಯಾಸಿಯನ್ನಾಗಿ ಮಾಡಿದರು. ಬಹುಸಂಖ್ಯೆಯ ಯೋಗ್ಯರಾದ ಗೃಹಸ್ಥಾಶ್ರಮಿಗಳನ್ನು ಶ್ರೀಮದಾಚಾರ್ಯರು ಶಿಷ್ಯರನ್ನಾಗಿ ಮಾಡಿಕೊಂಡರು. ಅಂತಹ ಶ್ರೀಮದಾಚಾರ್ಯರು ಕಣ್ವತೀರ್ಥದ ಸಮೀಪದಲ್ಲಿ ಚಾತುರ್ಮಾಸ್ಯಕ್ಕೆಂದು ನೆಲೆಸಿದರು. ವಿಜಯಶಾಲಿಗಳಾದರು.

ಸಂಸ್ತವ್ಯೋ ವೇದಮಾನಂ ಸಮವಿತುಮತನೋದ್ದೋಷಧೀರ್ಯಃ ಕ್ಷಣಾಂತೇ
ದೀಪ್ತಾಂಗುಷ್ಠಃ ಶಿಲಾನೀಃ ಶ್ರುತಿವಿವರಣಕೃದ್ ವರ್ಣಿತಃ ಸ್ತಂಭಿತಾಬ್ಧಿಃ ।
ಅಂಗುಲ್ಯಾ ಗಂಡವಾಟಾವತುಲಬಲಚಣೌ ಚಾಲನೇ ಯಸ್ಯ ನಾಲಂ
ಪ್ರಾಗ್ವಾಟೋ ವಾ ವಟೂಢೋ ಮಮ ಮನಸಿ ಲಸೇದಪ್ಯಲಾವ್ಯೈಕಲೋಮಾ ॥ ೩೦ ॥

ಶ್ರೀಮದಾಚಾರ್ಯರು ವೇದಪ್ರಾಮಾಣ್ಯವನ್ನು ರಕ್ಷಿಸುವುದಕ್ಕಾಗಿ ತಕ್ಷಣದಲ್ಲಿಯೇ 'ಯಾ ಓಷಧೀಃ' ಎಂಬ ಸೂತ್ರವನ್ನು ಪಠಿಸುತ್ತಾ ಬಂಜರಾದ ಕಾಳುಗಳು ಮೊಳಕೆಯೊಡೆಯುವಂತೆ ಮಾಡಿದರು. ಕತ್ತಲೆಯಲ್ಲಿ ತಮ್ಮ ಪ್ರಕಾಶಮಾನವಾದ ಹೆಬ್ಬೆಟ್ಟಿನ ಉಗುರಿನಿಂದ ಬೆಳಕನ್ನು ಸೃಷ್ಟಿಸಿದರು. ಕಳಶ ಎಂಬ ಗ್ರಾಮದಲ್ಲಿ ಯಾರಿಂದಲೂ ಒಯ್ಯಲಾಗದಿರುವ ಬಂಡೆಯನ್ನು ಒಂದೇ ಕೈಯಲ್ಲಿ ತಂದು ತುಂಗಭದ್ರಾ ನದಿಯ ಮಧ್ಯದಲ್ಲಿ ಇಟ್ಟರು. ಉಕ್ಕಿ ಬರುವ ಸಮುದ್ರವನ್ನು ಕೆರೆಯಂತೆ ಮಾಡಿದರು. ಹೀಗೆ ಎಣೆಯಿಲ್ಲದ ಸಾಮರ್ಥ್ಯದಿಂದ ಪ್ರಸಿದ್ಧರಾದ ಶ್ರೀಮಧ್ವಾಚಾರ್ಯರು, ಗಂಡವಾಟ, ಪೂರ್ವವಾಟ ಎಂಬ ಬ್ರಾಹ್ಮಣ ಅಣ್ಣತಮ್ಮಂದಿರನ್ನು ಕರೆದು ತಮ್ಮ ಹೆಬ್ಬೆರಳನ್ನು ಅಲ್ಲಾಡಿಸುವಂತೆ ಹೇಳಿದರು. ಅವರಿಗೆ ಸಾಧ್ಯವಾಗಲಿಲ್ಲ. ಪೂರ್ವವಾಟ ಒಂದು ಬೆರಳನ್ನೂ ಅಲ್ಲಾಡಿಸಲು ಸಮರ್ಥನಾಗಲಿಲ್ಲ. ಒಬ್ಬ ಬ್ರಹ್ಮಚಾರಿಯ ಹೆಗಲಿನ ಮೇಲೆ ಕುಳಿತುಕೊಂಡು ನರಸಿಂಹದೇವಾಲಯಕ್ಕೆ ಪ್ರದಕ್ಷಿಣೆ ಬಂದರು. ಜಟ್ಟಿಗಳಿಂದಲೂ ಕೀಳಲಾಗದ ರೋಮವುಳ್ಳವರಾಗಿದ್ದರು. ಎಲ್ಲ ಮಹಾತ್ಮರ ಸ್ತೋತ್ರಕ್ಕೆ ಪಾತ್ರರಾದ ಶ್ರೀಮದಾಚಾರ್ಯರು ನನ್ನ ಮನಸ್ಸಿನಲ್ಲಿ ನಿರಂತರ ಪ್ರಕಾಶಿಸಲಿ.

ಪಾರಂತೀಶಾಭಿನಂದೀ ಸಪದಿ ಚ ಸರಿತಾಮಂತರೇಽವರ್ಷಯದ್ ಯೋ
ಗ್ರೀಷ್ಮೇ ಮಿತ್ರೀಚಕಾರಾಪ್ಯಹಿತಮಥ ಗತೋ ವೈದ್ಯನಾಥಂ ಸ್ವಭೂತ್ಯೈ ।
ಛಂದಃಖಂಡಾರ್ಥವಾದೀ ಜಿತಕುಮತಿಕುಲೋ ದುರ್ಜನೇರ್ಷ್ಯಾಭ್ಯುಪೇಕ್ಷೀ
ಲಘ್ವನ್ನಂ ಬೃಂಹಯೇದತ್ತ್ಯಪಿ ಬಹು ಧನಿನಾಮಲ್ಪಕಲ್ಪೇನ ತುಷ್ಯೇತ್ ॥ ೩೧ ॥

ಶ್ರೀಮದಾಚಾರ್ಯರು ಸ್ವಲ್ಪ ಸಮಯದಲ್ಲಿಯೇ ಪಾರಂತೀ ಎಂಬ ದೇವಾಲಯ ದಲ್ಲಿ ಸನ್ನಿಹಿತನಾದ ಶ್ರೀಹರಿಯನ್ನು ಆರಾಧಿಸಿದರು. ಶ್ರೀಮದಾಚಾರ್ಯರು ನೇತ್ರಾವತೀ, ಕುಮಾರಧಾರ ನದಿಗಳ ನಡುವೆ ಇರುವ ಇಡೇತುದೆ ಅಥವಾ ಸರಿದಂತರ ಎಂಬ ಸರೋವರದಲ್ಲಿ ಬೇಸಿಗೆಯಲ್ಲಿ ನೀರು ಬರುವಂತೆ ಮಾಡಿದರು. ಶ್ರೀಮದಾಚಾರ್ಯರು ತನ್ನ ತಲೆ ಒಡೆಯಲು ಬಂದ ಶತ್ರುವಾದ ವ್ಯಕ್ತಿಯನ್ನು ಸ್ನೇಹಿತನಂತೆ ಮಾಡಿಕೊಂಡರು. ತನ್ನ ಭಕ್ತರ ಸಂಪತ್ತಿಗಾಗಿ ವೈದ್ಯನಾಥ ಎಂಬ ಹೆಸರಿನ ಧನ್ವಂತರಿ ಕ್ಷೇತ್ರವನ್ನು ಕುರಿತು ಹೋದರು. ವೇದದ ಖಂಡಾರ್ಥಗಳನ್ನು ವ್ಯಾಖ್ಯಾನ ಮಾಡಿದರು. ಕುಮತಿಗಳನ್ನು ಗೆದ್ದರು. ಕೆಟ್ಟಜನರು ಮಧ್ವಗುರುಗಳಲ್ಲಿ ಅಸೂಯೆಯನ್ನು ತೋರಿಸಿದಾಗ ಉಪೇಕ್ಷಿಸಿದರು. ಮಧ್ವಗುರುಗಳು ಅಲ್ಪವಾದ ಅನ್ನವನ್ನು ನಾಲ್ಕುಪಟ್ಟು ಅಭಿವೃದ್ಧಿ ಮಾಡಿದರು. ಶ್ರೀಮಂತರು ತಂದಿಟ್ಟ ಅತಿಯಾದ ಅನ್ನವನ್ನು ಅಲ್ಪವೆಂದು ತಿಳಿದು ಭೋಜನ ಮಾಡಿದರು. ಅಂತಹ ಶ್ರೀಮದಾಚಾರ್ಯರು ನಮ್ಮ ವಿಷಯದಲ್ಲಿ ಸಂತುಷ್ಟರಾಗಲಿ.

ವೃಷ್ಟ್ಯಾದೀನಾಂ ನಿಯಂತೇತ್ಯಭಿಹಿತಚರಿತಃ ಸರ್ವಗೀರ್ವಾಣರತ್ನೈಃ
ಗಂಧರ್ವೈರ್ಗೀಯಮಾನೋ ದ್ಯುಸದಸಿ ಸಕಲೈಃ ಕೌತುಕಾನ್ನಮ್ಯಮಾನಃ ।

ದೃಷ್ಟ್ವಾ ಸಂಸ್ತೂಯಮಾನಃ ಸುರತರುಕುಸುಮೈರಾರ್ಯ ಆಕೀರ್ಯಮಾಣೋ
ಮಧ್ವೋ ಜಾಜ್ವಲ್ಯತೇಽಸೌ ಜಗತಿ ವಿಜಯತೇ ಸತ್ಸಭಾಮಂಗಲಾಯ ॥ ೩೨ ॥

ಎಲ್ಲ ದೇವಶ್ರೇಷ್ಠರಿಂದಲೂ ಮಳೆ ಮುಂತಾದವುಗಳನ್ನು ನಿಯಮಿಸುವವರು ಶ್ರೀಮದಾಚಾರ್ಯರು ಎಂದು ಹೊಗಳಿಸಿಕೊಳ್ಳಲ್ಪಟ್ಟರು. ದೇವತೆಗಳ ಸಭೆಯಲ್ಲಿ ಗಂಧರ್ವರಿಂದ ಸಂಗೀತದ ಮೂಲಕ ಪ್ರಶಂಸೆಗೆ ಪಾತ್ರರಾದರು. ಋಷಿಸಮೂಹ, ದೇವಸಮೂಹಗಳಿಂದಲೂ ಶ್ರೀಮದಾಚಾರ್ಯರ ವಿಜಯ ಮಹೋತ್ಸವವು ಅತ್ಯಂತ ಕುತೂಹಲದಿಂದ ನೋಡಲ್ಪಟ್ಟಿತು. ಪಾರಿಜಾತ ವೃಕ್ಷದ ಹೂವುಗಳಿಂದ ಶ್ರೀಮದಾಚಾರ್ಯರನ್ನು ದೇವತೆಗಳು ಅಭಿಷೇಕ ಮಾಡಿದರು. ಇಂತಹ ಶ್ರೇಷ್ಠರಾದ ಶ್ರೀಮದಾಚಾರ್ಯರು ಪುನಃ ಪುನಃ ಅತಿಶಯವಾಗಿ ಪ್ರಕಾಶಿಸುತ್ತಾರೆ. ಇಂತಹ ಶ್ರೀಮದಾಚಾರ್ಯರು ಸಜ್ಜನ ಸಮೂಹದ ಕಲ್ಯಾಣಕ್ಕೋಸ್ಕರ ಲೋಕದಲ್ಲಿ ಉತ್ಕೃಷ್ಟರಾಗಿರುತ್ತಾರೆ.

ದಶಪ್ರಮತಿವಿಕ್ರಮಂ ಬಹುವಿಧಾತ್ಮನಾ ಹೇಮವತ್
ಸುಮಧ್ವವಿಜಯಾಭಿಧಂ ವ್ಯಧಿತ ಭಾವದೀಪಾಹ್ವಯಮ್ ।
ಪ್ರಮೇಯನವಮಾಲಿಕಾಂ ಪುನರಿಮಾಂ ಚ ದಕ್ಷಾಂಚತಾಮ್
ಸತಾಂ ಶ್ರವಣಭೂಷಣಂ ವ್ಯದಧದೇಷ ನಾರಾಯಣಃ ॥ ೩೩ ॥

ಲೋಹದಲ್ಲಿ ಬಂಗಾರ ಶ್ರೇಷ್ಠವಾದುದು, ಮೃದುವಾದುದು. ಅದರಿಂದ ಒಳ್ಳೆಯ ಆಭರಣವನ್ನು ಮಾಡಬಹುದು. ಇದರಂತೆ ಶ್ರೀಮದಾಚಾರ್ಯರ ವಿಕ್ರಮ, ಪರಾಕ್ರಮ ಮಹಿಮೆಗಳು ಬಂಗಾರಕ್ಕೆ ಸಮಾನವಾಗಿವೆ. ನಾರಾಯಣಪಂಡಿತಾಚಾರ್ಯರು ಆಚಾರ್ಯರ ಚರಿತ್ರೆಯನ್ನು ಅನೇಕ ಪ್ರಕಾರದಿಂದ ಗುರುತಿಸಬೇಕೆಂದು ಮನಸ್ಸಿನಲ್ಲಿ ಸಂಕಲ್ಪ ಮಾಡಿ ಮೊದಲು ಭಾವಪ್ರಕಾಶ ಎಂಬ ವ್ಯಾಖ್ಯಾನ ಸಹಿತವಾದ ಮಧ್ವವಿಜಯ ಎಂಬ ಮಹಾಕಾವ್ಯವನ್ನು ಬರೆದರು. ಬಂಗಾರದಂತಿರುವ ಈ ಪ್ರಮೇಯ ನವಮಾಲಿಕಾ ಎಂಬ ಸಾರಗ್ರಂಥವನ್ನು ಎಲ್ಲರೂ ಸುಲಭವಾಗಿ ತಿಳಿಯಲಿ ಎಂಬ ಉದ್ದೇಶದಿಂದ ರಚಿಸಿದ್ದಾರೆ. ಬಂಗಾರದ ಅನೇಕ ಎಳೆಯ ಸರಗಳನ್ನು ಮಾಡುವಂತೆ ಮೂವತ್ತೆರಡು ಶ್ಲೋಕಗಳೆಂಬ ಎಳೆಗಳಿಂದ ಕೂಡಿದ ಈ ಗ್ರಂಥವನ್ನು ಪಂಡಿತಾಚಾರ್ಯರು ರಚಿಸಿರುತ್ತಾರೆ. ಇದು ಸಜ್ಜನರಿಗೆ ಕರ್ಣಭೂಷಣವಾಗಿದೆ. ಕೇಳುವುದಕ್ಕೆ ಆನಂದಕರವಾಗಿದೆ. ಈ ಗ್ರಂಥವು ಪಾರಾಯಣ ಮಾಡುವ ಸಮಸ್ತ ಸಜ್ಜನರ ಅಭೀಷ್ಟಗಳನ್ನು ಪೂರೈಸುತ್ತದೆ.

॥ ಇತಿ ಶ್ರೀಮತ್ಕವಿಕುಲತಿಲಕಶ್ರೀತ್ರಿವಿಕ್ರಮಪಂಡಿತಾಚಾರ್ಯಸುತ
ಶ್ರೀಮನ್ನಾರಾಯಣಪಂಡಿತಾಚಾರ್ಯವಿರಚಿತಾ ಪ್ರಮೇಯನವಮಾಲಿಕಾ ಸಮಾಪ್ತಾ ॥